ನೂಪುರ ಭ್ರಮರಿ–ನೃತ್ಯಸಂಶೋಧನ ನಿಯತಕಾಲಿಕೆ (2321– 2519 ISSN NO)

ಸಂಚಿಕೆ 2; ಸಂಪುಟ 14 ; ಜನವರಿ –ಏಪ್ರಿಲ್ 2020 ; ಅಂಕಣ- ಭರತಕೌತುಕ

No part of this publication is allowed for copying or reproducing. Copyright protected. Copyright infringement is punishable offence.

ನೃತ್ತರತ್ನಾವಳಿ ಗ್ರಂಥದ ಮೊದಲನೆಯ ಅಧ್ಯಾಯದಲ್ಲಿರುವ ಲಾಸ್ಯಾಂಗಗಳ ಪಾರಿಭಾಷಿಕಾರ್ಥಗಳ ಮುಂದುವರಿಕೆ

ಕಾಂಚನ ರೋಹಿಣಿ ಸುಬ್ಬರತ್ನಂ
(ಸಂಗೀತ ವಿದ್ವಾಂಸರು, ಬೆಂಗಳೂರು ನಿವಾಸಿ)

ಭಾರತೀಯ ಸಂಗೀತಶಾಸ್ತ್ರ (ಗೀತವಾದ್ಯನರ್ತನಗಳು), ಛಂದಃಶಾಸ್ತ್ರ, ಪಾಕಶಾಸ್ತ್ರ, ಆಯುರ್ವೇದ ಇತ್ಯಾದಿಗಳು ವಿದ್ಯೆಗಳು ವಿಶ್ವದ ಇತರ ರಾಷ್ಟ್ರಗಳಿಗಿಂತಲೂ ಬಹಳ ಪ್ರಾಚೀನದಿಂದಲೇ ಶಾಸ್ತ್ರೀಯವಾಗಿ, ವೈಜ್ಞಾನಿಕವಾಗಿ, ಹೆಚ್ಚು ಆಳವಾದ ಹರವಿನಿಂದ ಕೂಡಿದ್ದು ಆಗ ಲೋಕವ್ಯಾಪಿ ಭಾಷೆಯಾಗಿದ್ದ, ಸಂಸ್ಕೃತ ಭಾಷೆಯಲ್ಲಿಯೇ ಶಾಸ್ತ್ರಗ್ರಂಥಗಳಾಗಿ ಇವು ದಾಖಲಾಗಿವೆ. ಅತ್ಯಂತ ವೈಜ್ಞಾನಿಕವಾದ ಭಾಷಾಶಾಸ್ತ್ರೀಯವಾದ ಸಂಸ್ಕೃತವೂ ಭಾರತದ್ದೇ ಆಗಿದ್ದು ಅದರ ಹಿರಿಮೆಯಿಂದಾಗಿ ದೇವಭಾಷೆಯೆನಿಸಿಕೊಂಡಿದೆ. ಅದರಲ್ಲಿಯೂ ಸಂಗೀತ - ನಾಟ್ಯಶಾಸ್ತ್ರಗಳೆಂದರೆ ಬರೇ ರಂಜನೆಗೆ ಮಾತ್ರವಲ್ಲದೆ ಧರ್ಮ, ಅರ್ಥ, ಕಾಮ ಮತ್ತು ಮೋಕ್ಷಗಳೆಂಬ ಚತುರ್ವಿಧ ಪುರುಷಾರ್ಥಗಳನ್ನೂ ನೀಡುವ ಪಂಚಮವೇದವೆಂದು ಭಾರತೀಯರಿಗೆ ನಂಬುಗೆ ಹಾಗೂ ಅನನ್ಯವಾದ ಪೂಜನೀಯ ಭಾವ. ಭರತನು ತನ್ನ ನಾಟ್ಯಶಾಸ್ತ್ರದಲ್ಲಿ 'ನಾಟಕ' ವೆಂದರೆ 'ಲೋಕವೃತ್ತಾನುಕರಣ', ಭಾವಾನುಕೀರ್ತನ', ಕೃತಾನುಕರಣ' ಎಂದು ಮುಂತಾಗಿ ವಿವರಿಸಿ, ಇದು 'ಹಿತೋಪದೇಶಜನನ'ವೂ ಆಗಿದ್ದು 'ದೃಶ್ಯಕಾವ್ಯ'ವೆಂದೂ, ಎಲ್ಲ ಕಲೆಗಳ ಸಂಗಮವೆಂದೂ ಹೇಳುತ್ತಾನೆ. ಪಂಚಮವೇದವಾದ ನಾಟ್ಯವಿದ್ಯೆಯನ್ನು ಭರತನು ಲೋಕಕ್ಕೆ ನೀಡಿದ್ದರಿಂದ ಆತನು 'ಮುನಿ' ಎಂದು ಕರೆಯಲ್ಪಟ್ಟನು. ಆನಂತರದವರೆಲ್ಲರೂ ಆತನನ್ನು ಅನುಸರಿಸಿದರು.

ಹಿರಿಯ ವಿದ್ವಾಂಸರಾದ ಮಾನ್ಯ ಡಾ. ಶೇಷಶಾಸ್ತ್ರಿಗಳು ಜಾಯನನ ನೃತ್ತರತ್ನಾವಳಿಯ ಮೊದಲನೆಯ ನರ್ತನವಿವೇಕವೆಂಬ ಅಧ್ಯಾಯವನ್ನು ನೂಪುರಭ್ರಮರಿ ಪತ್ರಿಕೆಗಾಗಿ ಕನ್ನಡಕ್ಕೆ ಅನುವಾದವನ್ನು ಮಾಡಿಕೊಟ್ಟಿದ್ದಾರೆ. ಈವರೆಗೂ ಅದರಲ್ಲಿದ್ದ ಕೆಲವು ಪರಿಭಾಷೆಗಳಿಗೂ ಆ ಪರಿಭಾಷೆಗಳಲ್ಲಿಯೇ ಇದ್ದ ಇನ್ನು ಕೆಲವು ಪರಿಭಾಷೆಗಳಿಗೂ ಅರ್ಥಗಳನ್ನು ನೂಪುರಭ್ರಮರಿಯು ನಾಲ್ಕು ಭಾಗಗಳಲ್ಲಿ ನೀಡಿದೆ. ಇನ್ನುಳಿದಿರುವುದು ಮೊದಲನೆಯ ಅಧ್ಯಾಯದ ಕಡೆಯ ಭಾಗ. ಜಾಯಸೇನಾಪತಿಯ ನೃತ್ತರತ್ನಾವಳಿಯು ರಂಗಕಲಾಕ್ಷೇತ್ರಕ್ಕೆ ಎಷ್ಟು ಪ್ರಮುಖವಾದುದೆಂದು ಈ ಗ್ರಂಥದ ಪರಿಭಾಷೆಗಳನ್ನು ಕೂಲಂಕಷವಾಗಿ ಅಧ್ಯಯನ ಮಾಡಿದಲ್ಲಿ ತಿಳಿಯುತ್ತದೆ. ಪ್ರಥಮದ ನರ್ತನವಿವೇಕಾಧ್ಯಾಯದಲ್ಲಿಯೆ ಸಂಶೋಧನೆ ಮಾಡಲೇ ಬೇಕಾದ ಸಾಕಷ್ಟು ವಿಷಯಗಳು ಇದೆಯೆಂದು ನಾವು ಗಮನಿಸಬಹುದು. ಗ್ರಂಥದ ಈ ಭಾಗವು ನೃತ್ತ ನೃತ್ಯಗಳನ್ನು ಮಾತ್ರವಲ್ಲದೆ ರೂಪಕ, ಉಪರೂಪಕಗಳನ್ನೂ, ಸಂಧ್ಯಂಗವಿಕಲ್ಪಗಳ ಪರಿಭಾಷೆಗಳನ್ನೂ ಹೇಳಿರುವುದನ್ನು ನೋಡುತ್ತಿದ್ದೇವೆ. ಸಂಧ್ಯಂಗವಿಕಲ್ಪಗಳು ನಾಟಕ /ಕಾವ್ಯ ರಚನೆಯಲ್ಲಿ ಇರಬೇಕಾದ ಹಾಗೂ ಅನುಸರಿಸಬೇಕಾದ ನಿಯಮಗಳು ಹಾಗೂ ಲಕ್ಷಣಗಳನ್ನು ಹೇಳುತ್ತವೆ. ಪ್ರಾಚೀನ ಭಾರತದ ಮಹಾಕಾವ್ಯಗಳನ್ನಾಗಲೀ, ಖಂಡಕಾವ್ಯಗಳನ್ನಾಗಲೀ, ರೂಪಕ (ಈಗಿನ ನಾಟಕ) ಗಳ ರಚನೆಗಳನ್ನಾಗಲೀ, ಕಲಾಶಾಸ್ತ್ರಗ್ರಂಥಗಳನ್ನಾಗಲೀ ಅಭ್ಯಸಿಸಬೇಕಾದರೆ ಸಂಧ್ಯಂಗವಿಕಲ್ಪಗಳನ್ನರಿಯುವುದು ಅವಶ್ಯಕವಾಗಿದೆ. ರಂಗಭೂಮಿಯನ್ನೂ, ಅದರ ಅನೇಕ ಕಲೆಗಳನ್ನು ಅಭ್ಯಸಿಸಬೇಕಾದ ವಿಧಗಳನ್ನೂ, ಹಾಗೂ ಅದಕ್ಕಾಗಿ ಅನುಸರಿಸಬೇಕಾದ ವಿಧಿವಿಧಾನಗಳನ್ನೂ ಈ ಗ್ರಂಥವು ಹೇಳುವುದು ಮಾತ್ರವಲ್ಲದೆ ಈ ಶಾಸ್ತ್ರಗಳ ಇತಿಹಾಸವನ್ನೂ ಜಗತ್ತಿಗೆ ತಿಳಿಸುವಲ್ಲಿಯೂ, ಆಯಾ ಶಾಸ್ತ್ರಗಳ ನಿಯಮಗಳ ಬಗ್ಗೆ ಅರಿವನ್ನು ಮೂಡಿಸುವಲ್ಲಿಯೂ ಈ ಗ್ರಂಥವು ಎಷ್ಟು ಅತ್ಯಮೂಲ್ಯವಾಗಿದೆಯೆಂಬುದನ್ನು ನಾವು ಊಹಿಸಬಹುದು. ಜೊತೆಗೆ ಆ ಕಾಲದಲ್ಲಿ ಆಂಧ್ರದಲ್ಲಿ ಇದ್ದಿರಬಹುದಾದ ನೃತ್ತ ನೃತ್ಯ ನರ್ತನ ನಾಟ್ಯ ನಾಟಕಗಳ ರಂಗಭೂಮಿಯ ಲಕ್ಷಣೇತಿಹಾಸವನ್ನೂ ಇದು ಹೇಳುತ್ತಿದೆ. ಡಾ. ಶೇಷಶಾಸ್ತ್ರಿಗಳು ಇಷ್ಟು ಭಾಗವನ್ನಾದರೂ ಕನ್ನಡಕ್ಕೆ ಅನುವಾದವನ್ನು ಮಾಡಿದ್ದು, ನೂಪುರಭ್ರಮರಿಯು ಅದನ್ನು ಪ್ರಕಟಿಸಿದ್ದು ಕನ್ನಡನಾಡಿನ ಪುಣ್ಯವೇ ಸರಿ. ಮುಂದೆಯೂ ಈ ಕಾರ್ಯವನ್ನು ಮುಂದುವರೆಸಿ ಸಂಪೂರ್ಣವಾಗಿ ಜಾಯನನ ನೃತ್ತರತ್ನಾವಳಿಯನ್ನು ಕನ್ನಡಕ್ಕೆ ಅನುವಾದಿಸಿ ಕನ್ನಡಕ್ಕೂ, ಕನ್ನಡನಾಡಿಗೂ, ಕನ್ನಡನಾಡಿಗರಿಗೂ ಉಪಕರಿಸಬೇಕೆಂದು ಪೂಜ್ಯ ಶ್ರೀ ಶೇಷಶಾಸ್ತ್ರಿಗಳಲ್ಲಿ ಸವಿನಯ ಪ್ರಾರ್ಥನೆಯನ್ನು ಮಾಡುತ್ತೇನೆ. ಮಾನ್ಯ ಶತಾವಧಾನಿ ಡಾ. ರಾ. ಗಣೇಶ್

ರವರು ಅಂತರ್ಜಾಲತಾಣ ಪತ್ರಿಕೆ ಪ್ರೇಕ್ಷಾದಲ್ಲಿ ಬರೆದಿರುವ ಲಾಸ್ಯಾಂಗಗಳನ್ನು ಕುರಿತ ಲೇಖನದ ಭಾಗಾಂಶವನ್ನು ಕೃತಜ್ಞತಾಪೂರ್ವಕವಾಗಿ ಉಪಯೋಗಿಸಿಕೊಂಡಿದ್ದೇನೆ. ಈ ಭಾಗವು ಓದುಗರಿಗೆ ಲಾಸ್ಯಾಂಗಗಳನ್ನು ಅರ್ಥ ಮಾಡಿಕೊಳ್ಳಲು ಸುಲಭಸಾಧನವಾಗಿದೆ. ಅದರಲ್ಲಿರುವ ಪರಿಭಾಷೆಗಳಿಗೂ ಅರ್ಥವನ್ನು ಸಂಗ್ರಹಿಸಿ ನೀಡಲು ಯತ್ನಿಸಿದ್ದೇನೆ. ಕೆಲವೊಂದನ್ನು ಅತಿವ್ಯಾಪ್ತಿಯಿಂದಾಗಿ ವಿಧಿಯಿಲ್ಲದೆ ಬಿಡಬೇಕಾಗಿದೆ. ಯಾರಾದರೂ ಅಪೇಕ್ಷಿಸಿದಲ್ಲಿ ಇದರಲ್ಲಿ ಉಳಿದ ಶಬ್ದಗಳ ಪರಿಭಾಷೆಗಳನ್ನು ಮುಂದಿನ ಸಂಚಿಕೆಯಲ್ಲಿ ನೀಡಲು ಯತ್ನಿಸಲಾಗುವುದು.

— "ಲಾಸ್ಯಾಂಗಗಳೆಂದರೆ ಕೈಶಿಕೀವೃತ್ತಿಪ್ರಧಾನವಾದ ನರ್ತನದ ಅಂಶಗಳೆಂದು ತಾತ್ಪರ್ಯ. ಇವನ್ನು ಯಥೋಚಿತವಾಗಿ ಯಾವುದೇ ರೂಪಕಪ್ರಕಾರಗಳಲ್ಲಿಯೂ ಅಳವಡಿಸಿಕೊಳ್ಳಬಹುದು. ಮಾತ್ರವಲ್ಲ, ಇವುಗಳೇ ಮುಂದೆ ಬೆಳೆದುಬಂದ ಉಪರೂಪಕಗಳಲ್ಲಿಯೂ ಮುಖ್ಯಪಾತ್ರವನ್ನು ವಹಿಸಿದುವು. ಇದು ಸಹಜವೇ ಆಗಿದೆ. ಏಕೆಂದರೆ ಉಪರೂಪಕಗಳು ನೃತ್ಯ/ನೃತ್ತ/ನರ್ತನಪ್ರಧಾನವಾಗಿವೆ. ಆದರೆ ಲಾಸ್ಯಾಂಗಗಳನ್ನು "ಭಾಣ"ವೆಂಬ ಏಕಹಾರ್ಯರೂಪಕಪ್ರಕಾರವೊಂದರ ಅಂಗಗಳೆಂದೇ ಹಲವರು ಭ್ರಮಿಸಿದ್ದಾರೆ. ಇವುಗಳ ಸಂಖ್ಯೆ ಹತ್ತೆಂದೂ ಹನ್ನೊಂದೆಂದೂ ಹನ್ನೆರಡೆಂದೂ ಮತ್ತೂ ಹೆಚ್ಚೆಂದೂ ಹಲವು ಬಗೆಯ ಮತಭೇದಗಳಿವೆ (ಇವುಗಳ ಸಂಖ್ಯೆ ಎಷ್ಟೇ ಇರಲಿ; ಕಟ್ಟಕಡೆಗೆ ಇವೆಲ್ಲವೂ "ಚಿತ್ತವೃತ್ತ್ಯಂಶಗತ", "ವಿಭಾವಾದ್ಯಂಶಗತ" ಮತ್ತು "ಉಪರಂಜಕಭಾವಗತ" ಎಂಬ ಮೂರು ಪ್ರಮುಖವಿಭಾಗಗಳಲ್ಲಿ ಅಡಕವಾಗುತ್ತವೆಂದು ಅಭಿನವಭಾರತಿಯ ನಿಲವು. ಈ ಪ್ರಕಾರ ಲಾಸ್ಯಾಂಗಗಳೆಲ್ಲ ಬಗೆಬಗೆಯ ಸಾತ್ತ್ವಿಕಾಂಶಗಳನ್ನು ಆಂಗಿಕದ ಮೂಲಕ ಹೊರತರುವ ಯತ್ನಗಳೆನ್ನಬಹುದು). ಅಭಿನವಗುಪ್ತನು ಇವು ಒಟ್ಟು ಹತ್ತಷ್ಟೇ ಎಂದು ಹೇಳಿದ್ದಾನೆ. ಆದರೆ ಕಾಲಾಂತರದಲ್ಲಿ ಲಾಸ್ಯಾಂಗಗಳು ಸಂಖ್ಯೆಯನ್ನು ಹೆಚ್ಚಿಸಿಕೊಂಡಂತೆ ತೋರುತ್ತದೆ. ಈ ಪರಿಣಾಮವು ನೃತ್ಯಕಲೆಯ (ಉಪರೂಪಕಪರಂಪರೆಯ) ಬೆಳವಣಿಗೆಗೆ ಹೊಂದಿಕೊಂಡಿರುವುದು ಸಹಜವೇ ಆಗಿದೆ. ಭರತನು ನಿರೂಪಿಸಿರುವ ಲಾಸ್ಯಾಂಗಗಳೇ ಭಾರತೀಯನೃತ್ಯಪದ್ಧತಿಯ ಮೂಲಮಾತೃಕೆಗಳೆಂದು ಅನೇಕಸಂಶೋಧಕರ ಅಭಿಪ್ರಾಯ. ಅಭಿನವಗುಪ್ತನು ಲಾಸ್ಯಾಂಗಗಳು ಪಾರ್ವತೀದೇವಿಯಿಂದ ಪ್ರವರ್ತಿತವಾದ ಸ್ವತಂತ್ರನೃತ್ಯಪದ್ಧತಿಯೆಂದು ಒಕ್ಕಣಿಸುವುದಲ್ಲದೆ ಇವು ಕೈಶಿಕೀಪ್ರಧಾನವಾದ ರೂಪಕಗಳ ಪೂರ್ವರಂಗವಿಧಿಯಲ್ಲಿ ಮಿಗಿಲಾಗಿ ಬಳಕೆಯಾಗುತ್ತವೆಂದು ಹೇಳುತ್ತಾನೆ. ಲಲಿತವಾದ ನೃತ್ಯಪ್ರಾಧಾನ್ಯವುಳ್ಳ "ಚಿತ್ರ"ವೆಂಬ ಒಂದು ಬಗೆಯ ಪೂರ್ವರಂಗಪ್ರಕಾರದಲ್ಲಿ ಲಾಸ್ಯಾಂಗಗಳ ಅನ್ವಯವಿದ್ದಿತೆಂದು ನಾವು ಸುಲಭವಾಗಿ ಊಹಿಸಬಹುದು. ಜೊತೆಗೆ ತಾಳಾಧ್ಯಾಯವನ್ನು ವಿವರಿಸುವಾಗ ಅಲ್ಲಿ ಮತ್ತೆ ಲಾಸ್ಯಾಂಗಗಳ ಪ್ರಸ್ತಾವವನ್ನು ತಂದು ಪೂರ್ವರಂಗದಲ್ಲಿ ಅವುಗಳ ವಿನಿಯೋಗವು ಹೇಗಿದ್ದಿತೆಂಬುದನ್ನು ತಿಳಿಸುವುದಲ್ಲದೆ ಪೂರ್ವರಂಗಾಧ್ಯಾಯಕ್ಕೆ ಕೊಂಡಿಯನ್ನು ಕಲ್ಪಿಸುತ್ತಾನೆ. ಇಂತಾದರೂ ಅವನು ಮತ್ತೊಂದು ಸಂದರ್ಭದಲ್ಲಿ ಲಾಸ್ಯಾಂಗಗಳು "ನಾಟಕ"ಕ್ಕೆ ಅನಿವಾರ್ಯವೆಂದೂ ನಾಟಕವೆಂಬುದು ಕೇವಲ ದಶರೂಪಕಗಳಲ್ಲಿ ಒಂದಲ್ಲದೆ ಸಕಲವಿಧದ ರೂಪಕಗಳಿಗೆ ಕೂಡ ಉಪಲಕ್ಷಣವೆಂದೂ ಹೇಳುತ್ತಾನೆ. ಇದರಿಂದಲೇ ಆತನು ಭಾಣಗಳಿಗಷ್ಟೇ ಲಾಸ್ಯಾಂಗಗಳು ಸೀಮಿತವೆಂಬ ನಿಲವನ್ನು ತಳೆಯದೆ ಅವುಗಳ ನೃತ್ಯಪ್ರಾಧಾನ್ಯ ಮತ್ತು ತನ್ಮೂಲಕ ಒದಗಿಬಂದ ಸಕಲರೂಪಕ(ಉಪರೂಪಕ)ಪ್ರಕಾರವ್ಯಾಪ್ತಿಯನ್ನು ಸಹ ಮನಗಂಡಿದ್ದನೆಂದು ತಿಳಿಯುತ್ತದೆ (ಸಂ. ೩, ಪು. ೬೫-೭೪; ಸಂ. ೪. ಪು. ೩೬೭-೩೬೮). ಆದುದರಿಂದ ಅಭಿನವಗುಪ್ತನು ಲಾಸ್ಯಾಂಗಗಳ ಬಗೆಗೆ ಹೇಳುವಾಗ ಅಲ್ಪ-ಸ್ವಲ್ಪಪ್ರಮಾಣದ ಗೊಂದಲವನ್ನುಂಟುಮಾಡಿದ್ದರೂ ಅವುಗಳ ಪರಮಾರ್ಥವನ್ನು ಸರಿಯಾಗಿ ಮನಗಂಡಿದ್ದನೆಂಬುದು ನಿಜಕ್ಕೂ ಮಹತ್ತ್ವದ ಸಂಗತಿ. ಈ ಬಗೆಗೆ ಹೆಚ್ಚಿನ ಮಾಹಿತಿಗಾಗಿ ವಿ. ರಾಘವನ್ ಅವರ ಮತ್ತೊಂದು ಲೇಖನವನ್ನು (The Bhāṇas and The Lāsyāṅgas, Raghavan, V. Sanskrit Drama: Its Aesthetics and Production. Madras: 1993. pp. 163-175) ಆಸಕ್ತರು ಗಮನಿಸಬಹುದು". — ಶತಾವಧಾನಿ ಡಾ. ರಾ. ಗಣೇಶ್ (ಪ್ರೇಕ್ಷಾ ಅಂತರ್ಜಾಲಪತ್ರಿಕೆಯ ಲೇಖನದ ಭಾಗ. ಈ ಲೇಖನದ ಅಂತರ್ಜಾಲ ಸಂಪರ್ಕಕೊಂಡಿಯನ್ನು ಆಕರಋಣದ ಭಾಗದಲ್ಲಿ ನೀಡಿದೆ)

ಪರಿಭಾಷೆಗಳು —

#.. ಭಾಣ — "ದಶರೂಪಕಗಳಲ್ಲೊಂದಾದ ಭಾಣ ರೂಪಕದಲ್ಲಿ ಒಂದೇ ಪಾತ್ರ ಹಾಗೂ ಒಂದೇ ಅಂಕವಿರುತ್ತದೆ. ಈ ಪಾತ್ರವು ತನ್ನ ಅನುಭವದ ಬಗ್ಗೆ ಒಬ್ಬನೇ ಆಗಲಿ, ರಂಗಸ್ಥಲದಲ್ಲಿ ಇಲ್ಲದ ಇನ್ನೊಂದು ಪಾತ್ರದೊಡನೆಯಾಗಲಿ ಮಾತನಾಡಬೇಕು. ಇನ್ನೊಬ್ಬನೊಡನೆ ಮಾತನಾಡುವಾಗ, ಸಮರ್ಪಕ ಅಭಿನಯದಿಂದ, ಇನ್ನೊಬ್ಬನ ಭಾಷಣವನ್ನು ಆಕಾಶದಲ್ಲಿ ಕೇಳಿದಂತೆ ಮಾಡಿ, ಅದನ್ನು ತಾನು ಶಬ್ದಗಳಲ್ಲಿ ಪುನರುಚ್ಚರಿಸಬೇಕು. ಅನೇಕ ಅವಸ್ಥೆಗಳ ಅನುಭವಕ್ಕೆ

ಸಂಬಂಧಿಸಿದ್ದು, ಇದರಲ್ಲಿ ಧೂರ್ತ ಇಲ್ಲವೆ ವಿಟನ ಪಾತ್ರವಿರಬೇಕು. ಬಹಳಷ್ಟು ಚಲನವಲನಗಳನ್ನು ಪ್ರಯೋಗಿಸಬೇಕು, ಪರಂಪರೆಯ ಆಧಾರಗ್ರಂಥಗಳ ಅನುಸಾರವಾಗಿ ಭಾಣದ ಲಕ್ಷಣಗಳನ್ನು ಹೇಳಿದೆ" — ಎಂದು ಭರತನು ಹೇಳುತ್ತಾನೆ.

ಧನಂಜಯನು ರಚಿಸಿ ಆತನ ಸಹೋದರನಾದ ಧನಿಕನು ವ್ಯಾಖ್ಯಾನವನ್ನು ಬರೆದ ದಶರೂಪಕದಲ್ಲಿ ಭಾಣಕ್ಕೆ ಲಕ್ಷಣವು ಇಂತಿದೆ : "ಚತುರನೂ ಬುದ್ಧಿವಂತನೂ ಆದ ವಿಟನೊಬ್ಬನು ತನ್ನ ಸ್ವಂತದ ಅಥವಾ ಬೇರೊಬ್ಬರ ಧೂರ್ತಚರಿತ್ರೆಯನ್ನು ವರ್ಣಿಸಿದರೆ 'ಭಾಣ' ವಾಗುತ್ತದೆ. ಧೂರ್ತರೆಂದರೆ ಕಳ್ಳ, ಜೂಜುಗಾರ ಮುಂತಾದವರು. ಇಲ್ಲಿ ಒಂದೇ ಪಾತ್ರ. ಸಂಬೋಧನೆ, ಮಾತು, ಮರುಮಾತುಗಳನ್ನು ಆಕಾಶಭಾಷಿತದ ಮೂಲಕ ಮಾಡತಕ್ಕದ್ದು. ಅಲ್ಲಿಯ ಏಕಪಾತ್ರವು ಕಥಾನಾಯಕ ಅಥವಾ ಬೇರೆಯವನೂ ಆಗಿರಬಹುದು. ಶೌರ್ಯ, ಸೌಭಾಗ್ಯಗಳನ್ನು ಹೊಗಳುತ್ತ ವೀರ, ಶೃಂಗಾರರಸಗಳನ್ನು ಸೂಚಿಸತಕ್ಕದ್ದು. ಇಲ್ಲಿ ವಿಶೇಷವಾದ ಭಾರತೀವೃತ್ತಿಯಿರಬೇಕು. ಒಂದೇ ಅಂಕ. ವಸ್ತುವು ಕಲ್ಪಿತ. ಅಂಗಸಮೇತವಾದ ಮುಖ ನಿರ್ವಹಣ ಸಂಧಿಗಳೂ ಮತ್ತು ಲಾಸ್ಯದ ಹತ್ತು ಅಂಗಗಳೂ ಇರತಕ್ಕದ್ದು. (ಏಕಪಾತ್ರಾಭಿನಯವೇ ಭಾಣದ ಮುಖ್ಯ ವೈಶಿಷ್ಟ್ಯ. ಅವಕಾಶ ಕಡಿಮೆ ಇರುವುದರಿಂದ ರಸಗಳ ಸೂಚನೆ ಮಾತ್ರ ಇರುತ್ತದೆ)".

#.. ಚಿತ್ತವೃತ್ತಿ — ಮನೋಭಾವ, ಮನೋವೃತ್ತಿ, ಮನಃಸ್ಥಿತಿ, ಮನೋಧರ್ಮ. ಪತಂಜಲಿಯು ಐದು ಬಗೆಯಾದ ಚಿತ್ತವೃತ್ತಿಗಳನ್ನು ಹೇಳಿದ್ದಾನೆ. ಪ್ರಮಾಣ (ಸರಿಯಾದ ಜ್ಞಾನ), ವಿಪರ್ಯಾಯ (ತಪ್ಪುಗ್ರಹಿಕೆ), ವಿಕಲ್ಪ (ಪರಿಕಲ್ಪನೆ), ನಿದ್ರಾ, ಮತ್ತು ಸ್ಮೃತಿ.

#..ವಿಭಾವ — ಯಾವುದರ ಜ್ಞಾನದಿಂದ ನಮ್ಮಲ್ಲಿ ಭಾವನೆಗಳು ಹುಟ್ಟುತ್ತದೋ ಅದು ವಿ-ಜ್ಞಾನ. ವಿ-ಜ್ಞಾನಕ್ಕಾಗಿ ವಿ-ಭಾವವಿದೆ. ವಿಭಾವವೆಂದರೆ ಕಾರಣ, ಹೇತು ಎಂದು ಅರ್ಥ. ವಾಚಿಕ - ಆಂಗಿಕ - ಸಾತ್ತ್ವಿಕ ಅಭಿನಯಗಳು ಇದರಿಂದಲೇ ಹೊರಡುತ್ತವಾದ್ದರಿಂದ ಇದನ್ನು ವಿಭಾವ ಎಂದು ಕರೆಯುವುದು. ಉದಾಹರಣೆಗೆ ಹಾಸ ಎಂಬ ಸ್ಥಾಯೀಭಾವವು ಇನ್ನೊಬ್ಬರ ಅನುಕರಣ, ಅಸಂಬದ್ಧ ಮಾತು, ಕುಚೇಷ್ಟೆ, ಮೂರ್ಖತನ ಇಂತಹ ವಿಭಾವದಿಂದ ಹುಟ್ಟುತ್ತದೆ. ಶೋಕವೆಂಬ ಸ್ಥಾಯೀಭಾವದ ವಿಭಾವ ಎಂದರೆ ಶೋಕವನ್ನು ಹುಟ್ಟಿಸುವ ಕಾರಣಗಳಾದ ಇಷ್ಟಜನರಿಂದ ವಿಯೋಗ, ಸಂಪತ್ತಿನ ನಷ್ಟ, ವಧೆ, ಬಂಧನ, ದುಃಖದ ಅನುಭವ ಮುಂತಾದವು. (ಇವರ ಪರಿಭಾಷೆಯನ್ನೂ ಈ ಮೊದಲು ನೀಡಿದೆ)

#.. ಸಾತ್ವಿಕ — ಈ ಪರಿಭಾಷೆಯನ್ನು ಎರಡನೆಯ ಭಾಗದಲ್ಲಿ ನೀಡಿದೆ.

#.. ಚಿತ್ರವೆಂಬ ಪೂರ್ವರಂಗ ಪ್ರಕಾರ — ಪೂರ್ವರಂಗವೆಂದರೆ ನಾಟ್ಯ/ನಾಟಕದ ಮುಂಚೆಯೇ ರಂಗಸ್ಥಲದಲ್ಲಿ ನಡೆಯುವ, ಪ್ರಯೋಗವಾಗುವ ಗೀತ-ವಾದ್ಯಮೇಳಗಳು. ಪ್ರತ್ಯಾಹಾರ, ಅವತರಣ, ಆರಂಭ, ಆಶ್ರವಣಾ, ವಕ್ತ್ರಪಾಣಿ, ಆಸಾರಿತ, ಬಹಿರ್ಗೀತ, ಮಹಾಚಾರೀ ಮುಂತಾದ 18 ಬಗೆಯ ಅಂಗಗಳನ್ನು ನಾಟ್ಯಶಾಸ್ತ್ರದಲ್ಲಿ ಹೇಳಿದೆ. ಈ ವಾದ್ಯಮೇಳವನ್ನು ಗೀತ, ನೃತ್ತ, ಪಾಠ್ಯಸಹಿತವಾಗಿ ಜವನಿಕೆ (=ರಂಗಶೀರ್ಷ ಮತ್ತು ನೇಪಥ್ಯದಲ್ಲಿದ್ದ ಎರಡು ಬಾಗಿಲುಗಳ ನಡುವೆ ತೂಗುಬಿಟ್ಟ ಪರದೆ) ಯ ಹಿಂದಿನಿಂದಲೂ, ತೆರೆದ ಮೇಲೂ ನುಡಿಸಲಾಗುತ್ತಿತ್ತು. ನಾಟ್ಯ/ನಾಟಕದ ಶುದ್ಧಪೂರ್ವರಂಗದಲ್ಲಿ ಉತ್ಥಾಪಿನೀ, ದ್ವಿತೀಯ ಹಾಗೂ ತೃತೀಯ ಪರಿವರ್ತಗಳು, ಜರ್ಜರ ಗ್ರಹಣ, ಚತುರಶ್ರ ಹಾಗೂ ತ್ರ್ಯಶ್ರ ಪೂರ್ವರಂಗಗಳ ಪ್ರಯೋಗವನ್ನು ಮಾಡಿ, ನಂತರ ಚಿತ್ರಪೂರ್ವರಂಗವನ್ನು ಮಾಡಬೇಕಾಗಿತ್ತು. ಪೂರ್ವರಂಗವನ್ನು ವಿಧಿಗಳಿಗೆ ಅನುಸಾರವಾಗಿ ಮಾಡಿದರೆ ಅಥವಾ ಮಾಡದಿದ್ದರೆ ಉಂಟಾಗುವ ಶುಭಾಶುಭಗಳ ಫಲಗಳನ್ನು ನಾಟ್ಯಶಾಸ್ತ್ರದಲ್ಲಿ ಹೇಳಿ, ಆವಂತೀ, ಪಾಂಚಾಲೀ, ದಾಕ್ಷಿಣಾತ್ಯ ಹಾಗೂ ಓಢ್ರಮಾಗಧೀಗಳ ಪ್ರವೃತ್ತಿಗಳಿಗೆ ತ್ರ್ಯಶ್ರ ಮತ್ತು ಚತುರಶ್ರಗಳಲ್ಲಿ ಪೂರ್ವರಂಗವನ್ನು ಮಾಡಬೇಕು ಎಂಬ ನಿಯಮವನ್ನು ಹೇಳಿದೆ.

ಚಿತ್ರ ಪೂರ್ವರಂಗದಲ್ಲಿ ಉತ್ಥಾಪನೆಯ ನಂತರ ಸೂತ್ರದಾರನು ತಿರುಗಿ ನಿಂತಾಗ, ಚತುರ್ಥಕಾರನು ತಂದ ಹೂಗಳಿಂದ ಅಲಂಕರಿಸಿದ ಮೇಲೆ, ಪರಿಣತರಾದ ಗಂಧರ್ವ (ಸಂಗೀತಗಾರ)ರು ಅವಶ್ಯವಿರುವಷ್ಟು ಪ್ರಮಾಣದಲ್ಲಿ ಉದಾತ್ತವಾದ(ಮೇಲುಧ್ವನಿಯಲ್ಲಿ, ಸ್ವರದಲ್ಲಿ) ಗಾಯನವನ್ನು ಮಾಡಿದ ನಂತರ ದೇವದುಂದುಭಿಗಳನ್ನು ಬಾರಿಸಬೇಕು. ಉತ್ಥಾಪನೆಯೆಂದರೆ ಸೂತ್ರದಾರ ಹಾಗೂ ಅವನ ಪಾರಿಪಾರ್ಶ್ವಕರು ರಂಗವನ್ನು ಪ್ರವೇಶ ಮಾಡುವಾಗ ಇರಬೇಕಾದ ವೇಷಗಳು, ಆಯುಧಗಳು, ಹಾಗೂ ಗೀತನೃತ್ತಗಳ ಪ್ರಯೋಗಕ್ಕೆ ಭಾಂಡ ಇತ್ಯಾದಿ ವಾದ್ಯಗಳನ್ನು ನುಡಿಸುವ ನಿಯಮಗಳು, ಹಾಡುವ ಧ್ರುವಾ ಗೀತಗಳಿಗೆ ಇರುವ ನಿಯಮಗಳು ಇತ್ಯಾದಿಗಳು. ಚತುರ್ಥಕಾರನೆಂದರೆ ಸೂತ್ರಕಾರನು

Copyright protected

ರಂಗದ ಪ್ರವೇಶಾನಂತರ ಮಾಡಿದ ಉತ್ಥಾಪಿನೀ ಇತ್ಯಾದಿ ಮೂರು ಕೆಲಸಗಳ ನಂತರ ನಾಲ್ಕನೆಯದನ್ನು ಮಾಡುವವನು. ಚತುರ್ಥಕಾರನು ಹೂಗಳನ್ನು ತೆಗೆದುಕೊಂಡು ಬಂದು ಜರ್ಜರ, ಎಲ್ಲ ವಾದ್ಯಗಳು ಮತ್ತು ಸೂತ್ರದಾರ ಇವರೆಲ್ಲರ ವಿಧಿವತ್ತಾದ ಪೂಜೆಯನ್ನು ಮಾಡಬೇಕು. ಚತುರ್ಥಕಾರನು ಅಕ್ಷರವಿಲ್ಲದ (ರಾಗಾಲಪ್ತಿ) ಗಾಯನಕ್ಕೂ ಪುಷ್ಕರವಾದ್ಯದ ನುಡಿಸಾಣಿಕೆಗೂ ತಕ್ಕಂತೆ ಹೆಜ್ಜೆಗಳನ್ನಿಡುತ್ತ ಪೂಜೆಯನ್ನು ಮಾಡಿ ನಂತರ ಅಂತರ್ಹಿತನಾಗಬೇಕು. ನಂತರ ಸಿದ್ಧರು ಹೂಮಾಲೆಗಳನ್ನು ಸುತ್ತಲೂ ಚೆಲ್ಲಬೇಕು. ಆಮೇಲೆ ದೇವತಾಸ್ತ್ರೀಯರು ಅಂಗಹಾರಗಳನ್ನು ಪ್ರಯೋಗಮಾಡುತ್ತ ನರ್ತಿಸಬೇಕು. ರೇಚಕಗಳಿಂದ, ಅಂಗಹಾರಗಳಿಂದ ಕೂಡಿದ ತಾಂಡವನೃತ್ತವನ್ನು, ಒಂದೊಂದು ನಾಂದೀ ಪದದ ನಂತರ ನರ್ತಿಸಿದರೆ ಅದು ಚಿತ್ರಪೂರ್ವರಂಗವಾಗುತ್ತದೆ. ಶುದ್ಧವಾಗಲೀ ಚಿತ್ರವಾಗಲೀ ಪೂರ್ವರಂಗವನ್ನು ವಿಧಿವತ್ತಾಗಿ ಪ್ರಯೋಗಿಸಿದ ಮೇಲೆ ನಿಯಮಿಸಿದ ಲಕ್ಷಣಗಳಿಂದ ಯುಕ್ತವಾದ ನಾಟ್ಯ/ನಾಟಕ ಪ್ರಯೋಗವು ಆರಂಭವಾಗಬೇಕು. ಆಗ ದೇವತಾಸ್ತ್ರೀಯರು ಅಂತರ್ಹಿತರಾಗಬೇಕು, ಆಮೇಲೆ ಎಲ್ಲ ನರ್ತಕಿಯರೂ ನಿರ್ಗಮಿಸಬೇಕು ಎಂದು ನಾಟ್ಯಶಾಸ್ತ್ರವು ಹೇಳುತ್ತದೆ. ಭರತಮುನಿಯು ಚಿತ್ರಪೂರ್ವರಂಗದಲ್ಲಿ ಯಾವುದೇ ಕಾರಣಕ್ಕೂ ನೃತ್ತವನ್ನಾಗಲೀ, ಗೀತವನ್ನಾಗಲೀ ಅತಿಯಾಗಿ ಬೆಳೆಸಬಾರದು, ಇವುಗಳನ್ನು ಅತಿಯಾಗಿ ಮಾಡಿದರೆ ನಟನಟಿಯರಿಗೂ ಪ್ರೇಕ್ಷಕರಿಗೂ ಬೇಸರದಿಂದಲೇ ಒಂದು ತರಹದ ದಣಿವು ಉಂಟಾಗುತ್ತದೆ. ದಣಿವು ಉಂಟಾದವರಿಗೆ ನಾಟಕದ ರಸಭಾವಗಳ ಸ್ಪಷ್ಟ ಪರಿಣಾಮಗಳು ಉಂಟಾಗಲಾರದು, ಇದರಿಂದ ಅವರಿಗೆ ಮುಂದಿನ ಪ್ರಯೋಗವು ಅಷ್ಟಾಗಿ ಮೆಚ್ಚಲಾರದು ಎಂಬ ಎಚ್ಚರಿಕೆಯೊಂದಿಗೆ ಈ ನಿಯಮವನ್ನು ಹೇಳುತ್ತಾನೆ. ಭರತಮುನಿಯು ಹೇಳುವ ಈ ನಿಯಮಗಳು ಎಂದೆಂದಿಗೂ ಪ್ರಸ್ತುತವೇ ಆಗಿದೆ. ಅಷ್ಟು ಪ್ರಾಚೀನ ಕಾಲದಲ್ಲಿಯೂ ಮುನಿಯು ರಂಗಪ್ರಯೋಗಕ್ಕಾಗಿ ನೀಡಿರುವ ಇಂತಹ ಸೂಕ್ಷ್ಮತರವಾದ ವಿವೇಚನೆ, ಎಚ್ಚರಿಕೆಗಳು ಆತನ ಮನೋವೈಜ್ಞಾನಿಕ ಚಿಂತನೆಗಳಿಗೆ ಸಾಕ್ಷಿಯಾಗಿವೆ.

ನೃತ್ತರತ್ನಾವಳಿಯಲ್ಲಿ ಹೇಳಿದ ಉಕ್ತಪ್ರತ್ಯುಕ್ತ ಲಾಸ್ಯಾಂಗ —

ಸಾಧಿಕ್ಷೇಪೈಃ ಪದೈರ್ಯುಕ್ತಂ ಚಿತ್ರಗೀತಾರ್ಥಯೋಜಿತಮ್
ಕೋಪಪ್ರಸಾದ ಸಂಜಾತ ಮುಕ್ತ ಪ್ರತ್ಯುಕ್ತಕಂ ವಿದುಃ ||೬||

ಕನ್ನಡಾನುವಾದ — ಎತ್ತಿ ಮಾತನಾಡುವ ಮಾತುಗಳನ್ನುಳ್ಳ, ತುಂಬಾ ಅಚ್ಚರಿಮೂಡಿಸುವ ಹಾಡನ್ನು ಉಳ್ಳ, ಅರ್ಥಗಳನ್ನುಳ್ಳ ಕೋಪ ಪ್ರಸಾದಗಳಿಂದ ಮೂಡುವಂತಹ ಲಾಸ್ಯಾಂಗವನ್ನು ಉಕ್ತಪ್ರತ್ಯುಕ್ತ (ಮಾತಿಗೆ ಮಾತು, ಎದುರಾಡುವುದು) ಎಂದು ಹೇಳುತ್ತಾರೆ.

#.. ಉಕ್ತಪ್ರತ್ಯುಕ್ತ ಲಾಸ್ಯಾಂಗದ ಲಕ್ಷಣಗಳು —
ಉಕ್ತಪ್ರತ್ಯುಕ್ತ ಲಾಸ್ಯಾಂಗವು ಕೋಪ ಮತ್ತು ಪ್ರಸಾದ (= ಸಾಂತ್ವನಗೊಳಿಸುವುದು) ಗಳನ್ನುಳ್ಳದ್ದು. ವಿಕ್ಷೇಪ (= ಖಂಡಿಸುವುದು) ಮತ್ತು ಉಪಕ್ರಮ (= ಸಾಂತ್ವನಗೊಳಿಸುವುದು) ಇವುಗಳಿಗೆ ಸಂಬಂಧಿಸಿದ ಸಂಭಾಷಣೆಗಳೂ ಈ ಲಾಸ್ಯಾಂಗದಲ್ಲಿ ಇರುತ್ತವೆ. ಪ್ರಕರಿಯ ವಜ್ರಾರ್ಧ ತಾಲವಿರುತ್ತದೆ. ಆಮೇಲೆ ಪಂಚಪಾಣಿ ತಾಲದಲ್ಲಿ ಶೀರ್ಷಕವಿರುತ್ತದೆ. ಈ ಲಾಸ್ಯಾಂಗವು ಸಾಂತ್ವನಗೊಳಿಸುವುದರಿಂದ ಅಂತ್ಯವಾಗಬೇಕು ಎಂಬ ಲಕ್ಷಣಗಳನ್ನು ಭರತಮುನಿಯು ನೀಡಿದ್ದಾನೆ. ಉಕ್ತಪ್ರತ್ಯುಕ್ತ ಲಾಸ್ಯಾಂಗವು ಮಾತು ಮತ್ತು ಅದಕ್ಕೆ ಉತ್ತರವನ್ನುಳ್ಳದ್ದು. ಇದರ ಸಂಭಾಷಣೆಯು ಮೂದಲಿಕೆ, ಆಕ್ಷೇಪಣೆ, ವಾಗ್ದಂಡನೆಗಳಿಂದ ಕೂಡಿದ್ದು ಇವು ಗಮನಸೆಳೆಯುವಂತಹ ಪ್ರಧಾನವಾದ ಹಾಡುಗಳ ಪ್ರಯೋಗವನ್ನು ಹೊಂದಿರುತ್ತದೆ.

ಈ ಲಾಸ್ಯಾಂಗವನ್ನು ಅಭಿನವಗುಪ್ತನು 'ಚಿತ್ರಗೀತಾರ್ಥ'ವನ್ನು, ಎಂದರೆ ಆಕರ್ಷಕವಾಗಿ ಆಸಕ್ತಿಯನ್ನು ಕೆರಳಿಸುವ ಧ್ರುವಾಗೀತ ಎಂದು ಹೇಳುತ್ತಾನೆ. ನಾಟ್ಯಶಾಸ್ತ್ರದ ಸಾಮಾನ್ಯಾಭಿನಯವೆಂಬ ಅಧ್ಯಾಯದಲ್ಲಿ ನಾಟ್ಯಾಯಿತವೆಂಬ ಆಂಗಿಕಾಭಿನಯವನ್ನು (ಶಾರೀರಿಕ ಅಭಿನಯವನ್ನು) ಹೇಳುತ್ತದೆ, ಇದು ಪಾತ್ರಗಳ ಪ್ರವೇಶವಾದಾಗ, ಧ್ರುವಾಗಳಲ್ಲಿಯ ಹರ್ಷ - ರೋಷ - ಶೋಕಗಳನ್ನು, ಬೇರೆ ಬೇರೆ ರಸಭಾವಗಳನ್ನು ಸೂಚಿಸುತ್ತ, ಪ್ರೇಕ್ಷಕರ ರಂಜನಕ್ಕಾಗಿ (ಕಾಲಪ್ರಕರ್ಷ) ಅಭಿನಯಿಸುವುದೆಂದು ಹೇಳಿದೆ, ಇದು ಲಾಸ್ಯದ ನಿರೂಪಣ ವಿಷಯವೆಂದೂ ರೂಪಕಕ್ಕೆ ಮುಖ್ಯವಾದುದೆಂದೂ ಇದು ಆಕಾಶಭಾಷಿತ, ಸ್ವಗತ, ಜನಾಂತಿಕ ಮತ್ತು ಅಪವಾರಿತ ಇತ್ಯಾದಿಗಳು ನಾಟಕದ ಭಾಗವಾಗಿ ಉಪಯೋಗಿಸಲ್ಪಡುತ್ತವೆ - ಎಂದು ಅಭಿನವಗುಪ್ತನು ಹೇಳುತ್ತಾನೆ. ಭೋಜನು, ರತ್ನಾವಳಿಯ ಮೂರನೆಯ ಅಂಕದಲ್ಲಿ ವತ್ಸರಾಜನು ಅಲ್ಲಿರುವ

Copyright protected

ಸ್ತ್ರೀಯು ವಾಸವದತ್ತೆಯೆಂದು ಗುರುತಿಸಿದಾಗ ಆಡುವ ಮಾತುಗಳನ್ನು ಇದಕ್ಕೆ ನಿದರ್ಶನವನ್ನಾಗಿ ನೀಡುತ್ತಾನೆ. ಸಾಗರನಂದಿಯು ಮದನಮಂಜುಳ ನಾಟಕದ ಮೂರನೆಯ ಅಂಕವನ್ನು ನಿದರ್ಶನವನ್ನಾಗಿ ನೀಡುತ್ತಾನೆ. ವಿಶ್ವನಾಥನು ಈ ಲಾಸ್ಯಾಂಗವು ಖಂಡನೆ ಮತ್ತು ಸುಳ್ಳುಗಾರಿಕೆಯ ಮಾತು, ಹಾಗೂ ಉತ್ತರಗಳ ಸಂಭಾಷಣೆಗಳಿಂದ ಕೂಡಿದ್ದು ಇದರ ಹಾಡುಗಳ ಭಾವವು ಸುಲಲಿತವಾಗಿರುತ್ತದೆ ಎಂಬ ಲಕ್ಷಣಗಳನ್ನು ನೀಡುತ್ತಾನೆ. ಕುಂಭನು ಈ ಲಾಸ್ಯಾಂಗವು ಕೋಪೋದ್ರಿಕ್ತ ನಾಯಕನನ್ನು ಸಮಾಧಾನ ಮಾಡುವಂತಹದು ಎನ್ನುತ್ತಾನೆ. ಶುಭಂಕರನು ಇದನ್ನು ಪ್ರತ್ಯುಕ್ತ ಎಂದು ಕರೆದು ಈ ಲಾಸ್ಯಾಂಗವು ನಾಯಿಕಾಳು ನಾಯಕನಿಗೆ ಕೋಪ ಹಾಗೂ ಕಾಪಟ್ಯದ ಮಾತುಗಳನ್ನಾಡುವುದು, ಎಂದು ವಿವರಿಸುತ್ತಾನೆ.

ಪರಿಭಾಷೆಗಳು —

#.. ಪ್ರಕರೀ —

1..ಇತಿವೃತ್ತವು ಕಾವ್ಯ /ನಾಟಕದ ಶರೀರವೆನ್ನಿಸಿಕೊಳ್ಳುತ್ತದೆ. ಅದನ್ನು ಮುಖ, ಪ್ರತಿಮುಖ, ಗರ್ಭ, ವಿಮರ್ಶ ಮತ್ತು ನಿರ್ವಹಣಗಳೆಂಬ ಐದು ಸಂಧಿಗಳಲ್ಲಿ ವಿಭಾಗಿಸಲಾಗಿದೆ. ಸಂಧಿ ಎಂದರೆ ಕೂಡುವುದು. ಇಲ್ಲಿ ಐದು ಅವಸ್ಥೆಗಳು ಮತ್ತು ಐದು ಅರ್ಥಪ್ರಕೃತಿಗಳು ಒಂದನ್ನೊಂದು (ಮೊದಲನೆಯದು ಮೊದಲನೆಯದಕ್ಕೆ ಎರಡನೆಯದು ಎರಡನೆಯದಕ್ಕೆ ಎಂದು ಈ ಕ್ರಮದಲ್ಲಿ) ಕೂಡುವುದರಿಂದ ಅವಕ್ಕೆ ಸಂಧಿ ಎಂದು ಹೆಸರು. ಸಂಧಿಗಳಿಗೆ ಸಂಧ್ಯಂಗಗಳೂ ಸಂಧ್ಯಂತರಗಳೂ ಇವೆ. ಸಂಧಿಗಳು ಕವಿಯ ಪ್ರಯತ್ನದಿಂದ (ಕಲ್ಪನೆಯಿಂದ) ಪ್ರಾರಂಭ, ಪ್ರಯತ್ನ, ಪ್ರಾಪ್ತಿಸಂಭವ, ನಿಯತ ಫಲಪ್ರಾಪ್ತಿ ಮತ್ತು ಫಲಯೋಗಗಳೆಂಬ ಐದು ಅವಸ್ಥೆಗಳಲ್ಲಿ ಉಂಟಾಗುತ್ತದೆ. ಸಂಧಿಗಳ ಈ ಐದು ಅವಸ್ಥೆಗಳಿಗೆ ಅನುಗುಣವಾಗಿ ಮತ್ತು ಅನುಕ್ರಮವಾಗಿ ಬೀಜ, ಬಿಂದು, ಪತಾಕಾ, ಪ್ರಕರೀ ಮತ್ತು ಕಾರ್ಯಗಳೆಂಬ ಐದು ಅರ್ಥಪ್ರಕೃತಿಗಳಿವೆ. ಅದರಲ್ಲಿ ಪ್ರಕರಿಯು ತಾನು ಉಪಾಖ್ಯಾನದಂತಿದ್ದು, ತಾನೇ ಮುಂದುವರೆಯದೆ ಪ್ರಧಾನ ವೃತ್ತಕ್ಕೆ ಪೋಷಕವಾಗಿರುವಂತೆ ನೋಡಿಕೊಳ್ಳಬೇಕು. ಪ್ರಧಾನಾರ್ಥಕ್ಕೆ (ಆಧಿಕಾರಿಕಕ್ಕೆ) ಪೋಷಕವಾಗುವ ಒಂದು ಇಲ್ಲವೆ ಹೆಚ್ಚು ಸಂಧಿಗಳು ಪ್ರಕರಿಯಲ್ಲಿರುವುದು ಅದರ ಮುಂದುವರಿಕೆ (ಅನುಬಂಧ) ಎನ್ನಿಸುತ್ತದೆ. ಇದರಲ್ಲಿ ಕಾರ್ಯವು ದುರಂತವೂ ಆಗಿರಬಹುದು, ಇನ್ನೊಂದು ಪಾತ್ರಕ್ಕೆ ಯಾವ ಲಭ್ಯತೆ ಇಲ್ಲದೆಯೂ ಇರಬಹುದು (ಇವಕ್ಕೆ ವಾಲ್ಮೀಕಿ ರಾಮಾಯಣದ ಶಬರಿ ವೃತ್ತಾಂತ ಮುಂತಾದ ಅನೇಕ ಸಂದರ್ಭಗಳನ್ನು ಉದಾಹರಣೆಗಾಗಿ ಇಟ್ಟುಕೊಳ್ಳಬಹುದು). ನಿಯತಪ್ರಾಪ್ತಿ ಎಂಬ ಅವಸ್ಥೆಗೆ ಪ್ರಕರೀ ಎಂಬ ಅರ್ಥಪ್ರಕೃತಿಯು ಸೇರಿ ವಿಮರ್ಶೆಯೆಂಬ ಸಂಧಿಯುಂಟಾಗುತ್ತದೆ.

2.. ಉಪಾಖ್ಯಾನದಂತಿರುವ ಪ್ರಕರೀಯನ್ನು ಕುರಿತಾದ ಈ ಭಾಗವು ನಾಟ್ಯಶಾಸ್ತ್ರದ 31ನೇ ತಾಲವಿಧಾನವೆಂಬ ಅಧ್ಯಾಯಲ್ಲಿ ಸಪ್ತಗೀತಗಳ ಏಳು ಪ್ರಕಾರಗಳಲ್ಲಿಯೂ ಒಂದಾಗಿ ಹೇಳಲ್ಪಟ್ಟಿದೆ. ಈ ಸಪ್ತಗೀತಕಗಳು : ಮದ್ರಕ, ಅಪರಾಂತಕ, ಉಲ್ಲೋಪ್ಯಕ, ಪ್ರಕರೀ, ಓವೇಣಕ, ರೋವಿಂದಕ ಮತ್ತು ಉತ್ತರ. ಈ ಏಳೂ ತರಹದ ಗೀತಗಳು ದಕ್ಷಿಣ ಮಾರ್ಗಕ್ಕೆ ಎಂದರೆ (ಚತುಷ್ಕಲಾ ತಾಲ) ಅನ್ವಯಿಸಿದೆ. ಇವು ಬ್ರಹ್ಮನಿಂದ ಉಚ್ಚರಿಸಲ್ಪಟ್ಟ ಗೀತಗಳು, ಸಾಮವೇದದಿಂದ ಬಂದಿದೆ ಎಂದು ನಾಟ್ಯಶಾಸ್ತ್ರವು ಹೇಳುತ್ತದೆ. (ಶ್ಲೋ. 369). ನಾಲ್ಕು ಕಲೆಗಳಿರುವ (ದಕ್ಷಿಣ) ಪ್ರಕರೀಯ ವಸ್ತುವಿನಲ್ಲಿ ಆರು ಮಾತ್ರಾಗಳು, ಹತ್ತೊಂಬತ್ತು ಪಾತಗಳು ಇರುತ್ತವೆ. ಆದ್ದರಿಂದ ಇದರಲ್ಲಿ ಯಥಾಕ್ಷರತಾಲವಾಗಲಿ, ಎರಡು ಕಲಾಗಳ ತಾಲವಾಗಲಿ ಇರುವುದಿಲ್ಲವೆಂದು ಹೇಳಿ ಈ ಆಖ್ಯಾನ ಭಾಗಕ್ಕೆ ಹಾಕಬೇಕಾದ ತಾಳ ನಿಯಮಗಳನ್ನು ಹೇಳಿದೆ. (ಅ. 31,(ಶ್ಲೋ. 315 - 322)

#.. ವಜ್ರಾರ್ಧ ತಾಲ —

ವಜ್ರವೆನ್ನುವುದು ದೈತ್ಯ ಸಂಹಾರಕವಾದ ಇಂದ್ರನ ಜರ್ಜರದಲ್ಲಿ (ಕೋಲು) ಇದೆಯೆಂದೂ (ಅ.1,ಶ್ಲೋ.82-88), ರಂಗಶೀರ್ಷವನ್ನು ಮಾಡುವಾಗ ಪೂರ್ವಕ್ಕೆ ವಜ್ರ, ದಕ್ಷಿಣಕ್ಕೆ ವೈಢೂರ್ಯ, ಪಶ್ಚಿಮಕ್ಕೆ ಸ್ಫಟಿಕ, ಉತ್ತರಕ್ಕೆ ಪ್ರವಾಳ, ನಡುವೆ ಚಿನ್ನ ಕೆತ್ತಿರಬೇಕೆಂದೂ (ಅ. 2,ಶ್ಲೋ.72ರ ನಂತರ), ರಂಗಪೂಜೆಯನ್ನು ಮಾಡುವ ಸಂದರ್ಭದಲ್ಲಿ, ಜರ್ಜರಕ್ಕೆ ಗಂಧ, ಮಾಲ್ಯ, ಧೂಪಗಳನ್ನು ವಿಧಿವತ್ತಾಗಿ ಅರ್ಪಿಸಿ, ಮಂತ್ರಪೂರ್ವಕವಾಗಿ ಆಹ್ವಾನಿಸಿ 'ಎಲೈ ಜರ್ಜರಾ, ಮಹಾವೀರನಾದ, ವಜ್ರಕ್ಕೆ ಸಮನಾದ, ದೊಡ್ಡ ಆಕೃತಿಯ ನಿನ್ನನ್ನು ಬ್ರಹ್ಮಾದಿ ದೇವತೆಗಳು ವಿಘ್ನಶಮನಕ್ಕೆ ನಿರ್ಮಿಸಿದ್ದಾರೆ ಎಂದು ಇತ್ಯಾದಿ ಸ್ತುತಿಸುವಲ್ಲಿಯೂ (ಅ. 3, 78-80), ಪ್ರತಿಮುಖಸಂಧಿಯ ಅಂಗಗಳಲ್ಲಿ ಒಂದಾದ ವಜ್ರವು ಎದುರೆದುರಿನಲ್ಲಿಯೇ ಮುಖಕ್ಕೆ ನಿಷ್ಠುರವಾಗಿ ಮಾತನಾಡುವುದೆಂದೂ (ಅ. 21,ಶ್ಲೋ. 79 ರ ನಂತರ) ಉಲ್ಲೇಖಗಳು ಮಾಡಲ್ಪಟ್ಟಿದ್ದರೂ ಉಕ್ತಪ್ರತ್ಯುಕ್ತ ಲಾಸ್ಯಾಂಗದಲ್ಲಿ ಹೇಳಿರುವ ಪ್ರಕರಿಯ ವಜ್ರಾರ್ಧ ತಾಲವು

Copyright protected

ವಿಶೇಷವಾಗಿ ಪ್ರಯೋಗಿಸುವ ತಾಲ ಪ್ರಭೇಧದಲ್ಲಿಯೇ ಒಂದಾಗಿದೆ. ಇದರಲ್ಲಿ ಏಳು ಪ್ರಕಾರದ ಗೀತಗಳಾದ ಮದ್ರಕ, ಉಲ್ಲೋಪ್ಯಕ, ಅಪರಾಂತಕ, ಪ್ರಕರಿ, ಓವೇಣಕ, ರೋವಿಂದಕ ಮತ್ತು ಉತ್ತರಗಳಲ್ಲಿ, ಓವೇಣಕದಲ್ಲಿ ವಜ್ರವೆಂಬ ತಾಲವನ್ನು ಹೇಳಿ,ವಜ್ರ ಎನ್ನುವುದಕ್ಕೆ ಕಾರಣ ಉಪವರ್ತನವನ್ನು ವಜ್ರದಂತೆ ಬಳಸಲಾಗುವುದು ಎಂದು ಹೇಳಿದೆ. ರೋವಿಂದಕದ ಹನ್ನೆರಡು ಅಂಗಗಳಲ್ಲಿ ನಾಲ್ಕನೆಯ ಅಂಗವಾಗಿ ವಜ್ರತಾಲವನ್ನು ಹೇಳಿದೆ (ಅ. 31ರಲ್ಲಿ), ಧ್ರುವಾದ ಐದು ಪ್ರಕಾರಗಳಾದ ಪ್ರಾವೇಶಿಕೀ, ಅಡ್ಡಿತ, ಅವ(ಪ)ಕೃಷ್ಟಾ, ಸ್ಥಿತ, ಖಂಜ-ನಟ್ಕುಟ, ಅಂತರಾ ಎಂಬವುಗಳಲ್ಲಿ ಪ್ರಾವೇಶಿಕೀ ಧ್ರುವಾದಲ್ಲಿ ಇರುವ ನಾಲ್ಕು ತಾಲದ ಅಂಗಗಳಲ್ಲಿ ವಜ್ರವೂ ಒಂದಾಗಿದೆ.

#.. ಪಂಚಪಾಣಿ ತಾಲ — ಕಳೆದ ಲಾಸ್ಯಾಂಗಗಳ ಭಾಗದಲ್ಲಿ ನೀಡಲಾಗಿದೆ.

#.. ಶೀರ್ಷಕ — ಈ ಪರಿಭಾಷೆಯನ್ನು ಈ ಮೊದಲು ನೀಡಿದೆ.

#.. ಸಂಧಿಗಳು ಹಾಗೂ ಅವುಗಳ ವಿಕಲ್ಪಗಳು — ಇವುಗಳನ್ನು ಕುರಿತಾಗಿ ಈ ಬರಹದ ಕಡೆಯಲ್ಲಿ ಪ್ರತ್ಯೇಕವಾಗಿ ಪೂರ್ಣವಾಗಿ ಪರಿಭಾಷೆಗಳನ್ನು ನೀಡಿದೆ. ಸಂಧಿಗಳನ್ನು ಕುರಿತು ಈ ಮೊದಲೇ ಹೇಳಿದ್ದರೂ ಮುಂದೆ ಅವುಗಳ ವಿಕಲ್ಪಗಳನ್ನೂ ಒಟ್ಟಿನಲ್ಲಿ ಅರ್ಥ ಮಾಡಿಕೊಳ್ಳಲು ಸುಲಭವಾಗುತ್ತದೆಂದು ಮತ್ತೊಮ್ಮೆ ನೀಡಿದೆ.

#.. ಸಾಮಾನ್ಯಾಭಿನಯ — ಸಾಮಾನ್ಯಾಭಿನಯವು ಮಾತು - ಅಂಗ - ಸತ್ತ್ವಗಳಿಂದ ಹುಟ್ಟುವಂತಹದು. ಅದರಲ್ಲಿಯೂ ನಾಟಕದಲ್ಲಿ ಸತ್ತ್ವದ ಬಗ್ಗೆ ಹೆಚ್ಚು ಪ್ರಯತ್ನವನ್ನು ಮಾಡಬೇಕಾಗುತ್ತದೆ. ಸತ್ತ್ವದ ಮೇಲೆಯೇ(ಸಾತ್ತ್ವಿಕಾಭಿನಯದ ಮೇಲೆಯೇ) ನಾಟಕವು ನಿಂತಿರುವುದು. ಮಾತು - ಅಂಗ - ಸತ್ತ್ವ, ಈ ಮೂರರಲ್ಲಿ ಸತ್ತ್ವ ಪ್ರಬಲವಾದರೆ ಅಂತಹ ಅಭಿನಯವು ಜ್ಯೇಷ್ಠವಾದುದು ಎನ್ನಿಸಿಕೊಳ್ಳುತ್ತದೆ. ಸತ್ತ್ವವು ಮಿಕ್ಕವುಗಳಿಗೆ ಸಮಾನವಾದರೆ ಅದು ಮಧ್ಯಮವಾದದು ಎನ್ನಿಸಿಕೊಳ್ಳುತ್ತದೆ. ಸತ್ತ್ವವೇ ಇಲ್ಲದಿದ್ದರೆ ಅದು ಅಧಮ ಎನ್ನಿಸಿಕೊಳ್ಳುತ್ತದೆ ಎಂದು ಭರತಮುನಿಯು ವಿವರಿಸುತ್ತಾನೆ. ನಾಟ್ಯಶಾಸ್ತ್ರವು ಸಾಮಾನ್ಯ ಅಭಿನಯದ ಬಗ್ಗೆ ಹೇಳುವುದನ್ನು 'ಸತ್ತ್ವೇ ಕಾರ್ಯಃ ಪ್ರಯತ್ನಸ್ತು' ಎಂದು ಮೊದಲ ಶ್ಲೋಕವು ಆರಂಭಿಸುವುದರಿಂದ ಸಾಮಾನ್ಯ ಅಭಿನಯವು ಸಾತ್ತ್ವಿಕ ಅಭಿನಯಕ್ಕೇ ಸಂಬಂಧಿಸಿದೆ ಎಂದೂ ಚಿತ್ರಾಭಿನಯದಿಂದ ಬೇರೆಯಾಗಿದೆ ಎಂದೂ ಸ್ಪಷ್ಟವಾಗಿದೆ.

ಎಲ್ಲಿ ವಾಚಿಕ - ಆಂಗಿಕ - ಅಭಿನಯಗಳನ್ನು ಸಮಾನವಾಗಿ, ಏಕಕಾಲದಲ್ಲಿ ಬಳಸಲಾಗುತ್ತದೋ ಅದು ಸಾಮಾನ್ಯಾಭಿನಯವೆನ್ನಿಸಿಕೊಳ್ಳುತ್ತದೆ, ಧ್ರುವಾ ಇತ್ಯಾದಿಗಳನ್ನು ಈ ಅಧ್ಯಾಯದಲ್ಲಿ ಹೇಳಿರುವುದರಿಂದ ಸಾಮಾನ್ಯ ಅಭಿನಯವು ನೃತ್ಯಕ್ಕೆ ಸಂಬಂಧಿಸಿದ್ದೂ ಇರಬಹುದೆಂದು ಎಂದು ಆದ್ಯ ರಂಗಾಚಾರ್ಯರು ವ್ಯಾಖ್ಯಾನಿಸುತ್ತಾರೆ.

#.. ಚಿತ್ರಾಭಿನಯ — ಚಿತ್ರಾಭಿನಯವು ಸಂಕೀರ್ಣ ಅಭಿನಯ, ಆಂಗಿಕ ಅಭಿನಯಕ್ಕೆ ಸಂಬಂಧಿಸಿದ್ದು. ಅದು ಅಭ್ಯುದಯ, ಆಕಾಶ, ಆಕಾಶಕಾಯ, ಆನೆ, ಉಯ್ಯಾಲೆ, ಋತು, ಎಮ್ಮೆ, ಒಂಟೆ, ಒಂದು..ಎರಡು.. ಹತ್ತು ಎಂಬ ಸಂಖ್ಯೆಗಳು, ಔದಾರ್ಯ, ಕಪಿ, ಕರಡಿ, ಕಾಡು, ಕಾಮ, ಕಿಡಿ, ಕೊಡೆ, ಗಂಧ, ಗರ್ವ, ಗಾಳಿ, ಗುಹೆ, ಗೃಹ, ಗ್ರಹಗ್ರಸ್ತ, ಗ್ರೀಷ್ಮ, ಜಲಾಶಯ, ಜ್ವರ, ದರ್ಪ, ದಾನವ, ದಿಕ್ಕು, ದಿವಸ, ಧೂಳು, ಧೈರ್ಯ, ನಕ್ಷತ್ರ, ಪತಾಕಾ, ಪರ್ವತ, ಪಿಶಾಚ, ಪ್ರದೋಷ, ಬಲ್ಮೆ, ಬಾವುಟ, ಬಿಲದ್ವಾರ, ಬೆಂಕಿ. ಭೂಗತ, ವಸ್ತು, ಭೂತ, ಮಧ್ಯಾಹ್ನ ಸೂರ್ಯ, ಮನೆ, ಮಿಂಚು, ಮೇಘಘರ್ಜನೆ, ಮೋಡ, ಯಕ್ಷ, ರಸ, ರಾಕ್ಷಸ, ರಾತ್ರಿ, ರೂಪ, ವರ್ಷಾಋತು, ವಸಂತ, ವಕ್ಷ, ಶಬ್ದ, ಶರದೃತು, ಶಾಪಗ್ರಸ್ತ, ಶಿಶಿರ, ಶುಕಸಾರಿಕ, ಶೌರ್ಯ, ಸಮುದ್ರತೀರ, ಸಾರಸ, ಸಿಂಹ, ಸುಡುವ ನೆಲ, ಸೂರ್ಯ, ಸೂರ್ಯೋದಯ, ಸೆಕೆ, ಸ್ಪರ್ಶ, ಹಂಸ, ಹಸು, ಹುಲಿ, ಹೇಮಂತ — ಮುಂತಾದವುಗಳ ಅಭಿನಯವನ್ನು ಹೊಂದಿದೆ.

#.. ನಾಟ್ಯಾಯಿತ — ಶಾರೀರಾಭಿನಯದಲ್ಲಿ (ಶರೀರ ಅವಯವಗಳ) ಆರು ಪ್ರಕಾರಗಳಿವೆ : ವಾಕ್ಯ, ಸೂಚಾ, ಅಂಕುರ, ಶಾಖಾ, ನಾಟ್ಯಾಯಿತ ಮತ್ತು ನಿವೃತ್ಯಂಕುರ. ಇವುಗಳಲ್ಲಿ ನಾಟ್ಯಾಯಿತವೆಂದರೆ ಪಾತ್ರಗಳ ಪ್ರವೇಶವಾದಾಗ, ಹಾಡುವ ಧ್ರುವಾಗಳಲ್ಲಿ ಇರುವ ಹರ್ಷ - ರೋಷ - ಶೋಕಗಳನ್ನು, ಬೇರೆ ಬೇರೆ ರಸಭಾವಗಳನ್ನು ಸೂಚಿಸುತ್ತ, ಪ್ರೇಕ್ಷಕರ ರಂಜನಕ್ಕಾಗಿ (ಕಾಲಪ್ರಕರ್ಷ) ಅಭಿನಯಿಸುವುದು.

Copyright protected

#.. ಕಾಲಪ್ರಕರ್ಷ — ಕಾಲಬೇಧದಿಂದ ಉಂಟಾಗುವ ಹೆಚ್ಚು ಕಡಿಮೆಗಳು.

ಈ ಕೆಳಗಿನ ನಾಲ್ಕು ಪರಿಭಾಷೆಗಳು ಚಿತ್ರಾಭಿನಯದಲ್ಲಿ ಒಳಗೊಳ್ಳುವ ರಂಗಸಮಯಗಳು.

#.. ಆಕಾಶಭಾಷಿತ — ದೂರದಲ್ಲಿದ್ದ, ರಂಗಸ್ಥಲದಲ್ಲಿ ಇಲ್ಲದ್ದ ಪಾತ್ರದ, ಅಶರೀರವಾಣಿಯು ಆಕಾಶಭಾಷಿತ. ಅನೇಕ ಕಾರಣಗಳಿಗಾಗಿ ನಾಟಕದ ವಸ್ತುವಾಗಿ ಅನುಷಂಗಿಕವಾಗಿ ಅದಕ್ಕೆ ಉತ್ತರವನ್ನೀಡುತ್ತ ಆಕಾಶಭಾಷಿತದಲ್ಲಿ ಸಂಭಾಷಣೆಯನ್ನು ನಡೆಸಬಹುದು. ಇದರಲ್ಲಿ ಪರೋಕ್ಷ ಪಾತ್ರದ ಮಾತುಗಳು ಊಹನೀಯವಾಗಿರುವುವು ಎಂದು ನಾಟ್ಯಶಾಸ್ತ್ರವು ಹೇಳಿದೆ. ಯಾವ ಪಾತ್ರವು ಬೇರೊಂದು ಪಾತ್ರವಿಲ್ಲದೆ, ಏನು ಹೇಳುತ್ತೀ? ಹೀಗೆ ಹೇಳುವೆಯೇನು? ಮುಂತಾಗಿ ಕೇಳುವುದು, ಆ ಇಲ್ಲದ ಪಾತ್ರವು ನಿಜವಾಗಿ ಏನನ್ನೂ ಹೇಳದಿದ್ದರೂ ಏನೋ ಕೇಳಿದಂತೆ ನಟಿಸುವುದು 'ಆಕಾಶಭಾಷಿತ' ಎಂದು ದಶರೂಪಕವು ಲಕ್ಷಣಗಳನ್ನು ನೀಡಿದೆ.

#.. ಸ್ವಗತ /ಆತ್ಮಗತ — ತನ್ನ ಮನಸ್ಸಿನೊಳಗಿದ್ದ ಮಾತು ಆತ್ಮಗತ /ಸ್ವಗತ. ಸಾಮಾನ್ಯವಾಗಿ ಅದು ಚರ್ಚೆ, ವಾದ (ಇದೂ ತನ್ನೊಳಗೆಯೇ) ಇವುಗಳಿಂದ ಕೂಡಿದ್ದು, ತನಗಾದ ಹರ್ಷ, ಭಯ ಮುಂತಾದ ಉತ್ಕಟಭಾವನೆಗಳನ್ನು ತನ್ನಷ್ಟಕ್ಕೆ ತಾನೇ ಹೇಳಿಕೊಳ್ಳುವುದು ಎಂದು ನಾಟ್ಯಶಾಸ್ತ್ರವು ಲಕ್ಷಣವನ್ನಿತ್ತರೆ ದಶರೂಪಕವು ನಾಟ್ಯಧರ್ಮದಲ್ಲಿ ಎಲ್ಲರಿಗೂ ಕೇಳುವಂತಹದು-ಸರ್ವಶ್ರಾವ್ಯ, ಕೆಲವರಿಗೆ ಮಾತ್ರ ಕೇಳುವಂತಹದು-ನಿಯತಶ್ರಾವ್ಯ, ಮತ್ತು ಕೇಳದೇ ಇರುವಂತಹದು-ಅಶ್ರಾವ್ಯ ಎಂದು ಮೂರು ವಿಭಾಗಗಳನ್ನು ಹೇಳಿದೆ. ಎಲ್ಲರಿಗೂ ಕೇಳುವಂತಹ ಮಾತು 'ಪ್ರಕಾಶ'. ಎಲ್ಲರಿಗೂ ಕೇಳದಂತಹ ಮಾತು 'ಸ್ವಗತ' ಎಂದು ವಿವರಿಸುತ್ತದೆ.

ನಾಟ್ಯಧರ್ಮವಾದ ನಿಯತಶ್ರಾವ್ಯದಲ್ಲಿ ಜನಾಂತ(ಜನಾಂತಿಕ) ಮತ್ತು ಅಪವಾರಿತ ಎಂದು ಎರಡು ಬೇಧವೆಂದು ದಶರೂಪಕವು ಲಕ್ಷಣವನ್ನು ಹೇಳಿದೆ.

#.. ಅಪವಾರಿತ — ರಹಸ್ಯವನ್ನೊಳಗೊಂಡಿದ್ದು ಅಪವಾರಿತ. ಇದರಲ್ಲಿ ಮಿಕ್ಕ ಪಾತ್ರಗಳಿಂದ ಬಚ್ಚಿಡುವಂತಹುದನ್ನು ಹೇಳುವುದು ಎಂದು ನಾಟ್ಯಶಾಸ್ತ್ರವು ಹೇಳಿದರೆ ಮತ್ತೊಬ್ಬನ ಕಡೆ ತಿರುಗಿ ಗುಟ್ಟು ಹೇಳುವುದು ಎಂದು ದಶರೂಪಕವು ಹೇಳಿದೆ.

#.. ಜನಾಂತಿಕ — ಇದರಲ್ಲಿ ಪಕ್ಕಪಕ್ಕದಲ್ಲಿದ್ದ ಪಾತ್ರಗಳು ಮಿಕ್ಕ ಪಾತ್ರಗಳಿಗೆ ಕೇಳಿಸಬಾರದೆಂಬ ಉದ್ದೇಶದಲ್ಲಿ ಮಾತನಾಡಬೇಕು. ಆದ್ದರಿಂದ ಪಿಸುಗುಡಬೇಕು. ಇದಲ್ಲದೆ, ಒಮ್ಮೆ ಹೇಳಿದ್ದನ್ನು ಮತ್ತೊಮ್ಮೆ ಹೇಳಬೇಕಾದಲ್ಲಿ, ಪುನರುಕ್ತಿಯಾಗದಂತೆ, ಕಿವಿಯಲ್ಲಿ ಪಿಸುಗುಡಬೇಕು ಎಂದು ಭರತನು ಹೇಳಿದರೆ, ಧನಂಜಯನು ತನಗೆ ಬೇಕಾಗಿರುವ ಒಬ್ಬರ ಹತ್ತಿರ, ತ್ರಿಪತಾಕಾ ಹಸ್ತದಿಂದ ಅನ್ಯರನ್ನು ಬೇರೆಯಾಗಿಸಿ ಬೇರೆ ಮಾತನ್ನು ಪರಸ್ಪರವಾಗಿ ಸಂಭಾಷಿಸುವುದು 'ಜನಾಂತಿಕ'. ಹಲವರು ಇರುವಾಗ ಇತರರಿಗೆ ಕೇಳದಂತೆ ಮಾತನಾಡುವುದು. (ಅನಾಮಿಕಾ, ಎಂದರೆ ಉಂಗುರದ ಬೆರಳು ಮಡಿಸಿರುವ ಮತ್ತು ಉಳಿದ ಬೆರಳುಗಳು ನೇರವಾಗಿರುವ ಹಸ್ತವು 'ತ್ರಿಪತಾಕಾ'.)

#.. ಅಪವಾರಿತ ಮತ್ತು ಜನಾಂತಿಕಗಳನ್ನು ಪತಾಕಾ ಹಸ್ತವನ್ನು ಅಡ್ಡ ಹಿಡಿದು ಮಾತನಾಡಬೇಕು ಎಂದು ನಾಟ್ಯಶಾಸ್ತ್ರವು ಹೇಳಿದೆ.

ಈ ಕೆಳಗಿನವು ದಶಲಾಸ್ಯಾಂಗಗಳಲ್ಲದ ಹೆಚ್ಚಿನವು —

ಚಿತ್ರಪದ ಲಾಸ್ಯಾಂಗದ ಲಕ್ಷಣ —

Copyright protected

ಯತ್ರಪ್ರಿಯಾ ಕೃತಿಂದೃಷ್ಟ್ವಾವಿನೋದಯತಿ ಮಾನಸಮ್
ಮನ್ಮಥಾನಲತಪ್ತಾಂಗೀ ತಚ್ಚಿತ್ರಪದಮುಚ್ಯತೇ ||೭೦||

— ಮನ್ಮಥಾಗ್ನಿಯಿಂದ ಬೇಯುವ ಅಂಗವನ್ನುಳ್ಳ ಸ್ತ್ರೀಯು ತನ್ನ ಪ್ರಿಯನ ಚಿತ್ರಪಟವನ್ನು ನೋಡುತ್ತಾ ಮನಸ್ಸನ್ನು ಸಮಾಧಾನಮಾಡಿಕೊಳ್ಳುವುದು ಚಿತ್ರಪದ.

ಭಾವಿಕ ಲಾಸ್ಯಂಗದ ಲಕ್ಷಣ —

ದೃಷ್ಟ್ವಾಸ್ವಪ್ನೇಪ್ರಿಯಂಯತ್ರ ಮದನಾನಲತಾಪಿತಾ
ಕರೋತಿ ವಿವಿಧಾನ್ ಭಾವಾಂ ಸ್ತದ್ವೈಭಾವಿಕೌಚ್ಯತೇ ||೭೧||

ಕನಸಿನಲ್ಲಿ ಪ್ರಿಯನನ್ನು ಕಂಡು, ಮದನಾಗ್ನಿಯಿಂದ ಬೆಂದುಹೋಗುತ್ತಾ ನಾಯಿಕೆಯು ವಿವಿಧ ಭಾವಗಳನ್ನು ತೋರಿಸುವುದು ಭಾವಿಕ ಎನ್ನಲ್ಪಡುತ್ತದೆ.

ಬರೋಡಾದ ನಾಟ್ಯಶಾಸ್ತ್ರದ ಹಸ್ತಪ್ರತಿಯ ಆವೃತ್ತಿಯು ಈವರೆಗೂ ನೀಡಿದ ಹತ್ತು ಲಾಸ್ಯಾಂಗಗಳನ್ನು ಮಾತ್ರವಲ್ಲದೆ ಚಿತ್ರಪದ ಹಾಗೂ ಭಾವಿಕವೆಂಬ ಇನ್ನೂ ಈ ಎರಡು ಲಾಸ್ಯಾಂಗಗಳನ್ನು ನೀಡಿದೆ. ಚಿತ್ರಪದ ಲಾಸ್ಯಾಂಗದಲ್ಲಿ ವಿರಹಾಗ್ನಿಯಿಂದ ಬಳಲುತ್ತಿರುವ ನಾಯಿಕೆಯು ತನ್ನ ಪ್ರಿಯಕರನನ್ನು ಭಾವಚಿತ್ರದಲ್ಲಿ ನೋಡುತ್ತ ತನ್ನ ಮನಸ್ಸನ್ನೂ , ಗಮನವನ್ನೂ ಬೇರೆಡೆಗೆ ಹರಿಸಲು ಪ್ರಯತ್ನಿಸುತ್ತಾಳೆ. ಭಾವಿಕಾ ಲಾಸ್ಯಾಂಗದಲ್ಲಿ ವಿರಹಾಗ್ನಿಯಿಂದ ಬಳಲುತ್ತಿರುವ ನಾಯಿಕೆಯು ಸ್ವಪ್ನದಲ್ಲಿ ಕಂಡ ತನ್ನ ಪ್ರಿಯಕರನಲ್ಲಿ ಅನೇಕ ವಿಧಗಳಲ್ಲಿ ತನ್ನ ಕಾಮೋದ್ದೀಪನವನ್ನು ಪ್ರಕಟಪಡಿಸುತ್ತಾಳೆ.

ಅಭಿನವಗುಪ್ತನು ಕಡೆಯ ಈ ಎರಡು ಲಾಸ್ಯಾಂಗಗಳನ್ನು ತನ್ನ ಹಿಂದಿನ ಅನೇಕ ಆಚಾರ್ಯರು ಹೇಳಿದ್ದನ್ನು ಉಲ್ಲೇಖಿಸಿದರೂ ಈ ಲಾಸ್ಯಾಂಗಗಳನ್ನು ಸೇರಿಸದೆ ಭರತಮುನಿಯು ಹತ್ತು ಲಾಸ್ಯಾಂಗಗಳನ್ನು ಮಾತ್ರ ಹೇಳಿದ್ದೆಂದೂ ಈ ಎರಡು ಲಾಸ್ಯಾಂಗಗಳ ಲಕ್ಷಣಗಳು ಆ ಹತ್ತು ಲಾಸ್ಯಾಂಗಗಳ ಲಕ್ಷಣಗಳಲ್ಲೇ ಸೇರಿದೆಯಾದ್ದರಿಂದ ಇವುಗಳ ಅವಶ್ಯಕತೆ ಇಲ್ಲವೆಂದೂ ಅಭಿಪ್ರಾಯ ವ್ಯಕ್ತಪಡಿಸಿದ್ದಾನೆ. ಕೈಶಿಕೀ ವೃತ್ತಿಯಿಂದ ಆಕರ್ಷಣೆಗೆ ಸಹಾಯಕವಾಗುವಂತಹ ಅಂಶವೇ ರಸೋತ್ಪತ್ತಿಗೂ ಉಂಟಾಗುತ್ತದೆ, ಕೈಶಿಕೀ ವೃತ್ತಿಯಲ್ಲಿರುವ ನಾಲ್ಕು ಬೇಧಗಳಲ್ಲಿಯೇ ಚಿತ್ರಪದ ಹಾಗೂ ಭಾವಿಕವೆಂಬ ಲಾಸ್ಯಾಂಗಗಳಲ್ಲಿರುವ ರಸೋತ್ಪತ್ತಿಯಾಗುತ್ತದೆ ಹಾಗೂ ಭರತನು ಹೇಳಿದ ಹತ್ತು ಲಾಸ್ಯಾಂಗಗಳಲ್ಲಿಯೇ ಈ ಎರಡು ಲಾಸ್ಯಾಂಗಗಳ ಲಕ್ಷಣಗಳೂ ಒಳಗೊಂಡಿರುವುದರಿಂದ ಅಧಿಕವಾಗಿ ಹೇಳಿದ ಈ ಎರಡು ಲಾಸ್ಯಾಂಗಗಳ ಅವಶ್ಯಕತೆ ಇಲ್ಲವೆಂಬುದು ಸ್ಪಷ್ಟವಾಗಿದೆಯೆಂದು ಅಭಿನವಗುಪ್ತನ ಅಭಿಪ್ರಾಯ. ಭೋಜ, ಸಾಗರನಂದಿ, ಶುಭಂಕರ ಮತ್ತು ವಿಶ್ವನಾಥರು ಚಿತ್ರಪಾದ ಹಾಗೂ ಭಾವಿಕಗಳನ್ನು ಸೇರಿಸಿಲ್ಲ. ನಾನ್ಯದೇವ ಮತ್ತು ಕುಂಭರು ಇವುಗಳನ್ನು ವರ್ಣಿಸಿದ್ದಾರೆ. ನಾನ್ಯದೇವನು ಚಿತ್ರಪದದಲ್ಲಿ ಪ್ರಿಯತಮನ ಸಮಾಗಮಕ್ಕಾಗಿ ಹಾತೊರೆಯುವ ನಾಯಿಕೆಯು ತನ್ನ ಸಖಿಯಿಂದ ಬರೆಯಲ್ಪಟ್ಟ ಚಿತ್ರದೊಂದಿಗೆ ಸಂಭಾಷಿಸುತ್ತಾಳೆ ಎಂದು ವರ್ಣಿಸಿದ್ದಾನೆ. ಕುಂಭನು ವಿರಹಪೀಡಿತಳಾದ ನಾಯಿಕೆಯು ಚಿತ್ರದಲ್ಲಿ ರಚಿಸಲ್ಪಟ್ಟ ತನ್ನ ಪ್ರಿಯತಮನನ್ನು ನೋಡಿ ವಿಷಣ್ಣಳಾಗಿರುವುದೆಂದು ವರ್ಣಿಸಿ ಎರಡು ಸಂಸ್ಕೃತ ಶ್ಲೋಕಗಳ ದೃಷ್ಟಾಂತಗಳನ್ನಿತ್ತಿದ್ದಾನೆ. ಶಾರದಾತನಯನು ಭಾವಿಕವನ್ನು ಹೇಳಿದ್ದಾನೆ. ನಾನ್ಯದೇವನು ಅದನ್ನು ಭಾವಿತವೆಂದು ಕರೆದಿದ್ದಾನೆ. ನಾಯಿಕೆಯು ತನ್ನ ಪ್ರಿಯತಮನನ್ನು ಬರೇ ಸ್ವಪ್ನದಲ್ಲಿ ಮಾತ್ರ ಕಂಡು ಅನೇಕ ವಿಧಗಳಲ್ಲಿ ಶೃಂಗಾರ ಭಾವಗಳನ್ನು ತೋಡಿಕೊಳ್ಳುತ್ತಾಳೆಂದು ಇವರಿಬ್ಬರೂ ಹೇಳಿದ್ದಾರೆ. ಶಾರದಾತನಯನು ಲಾಸ್ಯಾಂಗಗಳನ್ನು ಹೇಳುವಲ್ಲಿ ಹತ್ತೇ ಲಾಸ್ಯಾಂಗಗಳನ್ನು ಹೇಳಿದರೂ ವರ್ಣಿಸುವಲ್ಲಿ ಭಾವಿಕವನ್ನು ಹೇಳಿದ್ದಾನೆ. ಜಾಯಸೇನಾಪತಿಯು ಹತ್ತು ಲಾಸ್ಯಾಂಗಗಳನ್ನು ಮಾರ್ಗಲಾಸ್ಯಾಂಗಗಳೆಂದು ಕರೆದಿದ್ದಾನೆ. ತ್ರಿಮೂಢಕ ಮತ್ತು ದ್ವಿಮೂಢಕಗಳ ಬದಲಾಗಿ ಮೂಢಕವೆಂದು ಮಾತ್ರ ಹೇಳಿದ್ದಾನೆ.

ಕೇಚಿದೇತದ್ದ್ವಯಂ ಪ್ರಾಹುಃ ತನ್ನಮನ್ಯಾ ಮಹೋವಯಮ್
ಅಂಗಾನಿದಶಮಂ ಚೈವೇತಿ ಮುನಿನಾಯಾತ್ ಪ್ರಕೀರ್ತಿತಮ್ ||೭೨||

Copyright protected

ಈ ಮೇಲಿನ ಎರಡು ಅಂಗಗಳನ್ನು ಸಹಾ ಚಿತ್ರಪದ, ಭಾವಿಕ ಎಂದು ಕೆಲವರು ಹೇಳುತ್ತಾರೆ. ಆದರೆ ಅದನ್ನು ನಾವು ಅಂಗೀಕರಿಸುವುದಿಲ್ಲ. 'ಅಂಗಗಳು ಹತ್ತೇ' ಎಂಬುದಾಗಿ ಭರತಮುನಿ ಹೇಳಿರುವುದರಿಂದ, ಎಂದು ನೃತ್ತರತ್ನಾವಳಿಯು ಹೇಳುತ್ತದೆ.

ಉದ್ಧತಮ್ :

ಉದ್ಧತತುಮಹೇಶಸ್ಯ ಶಾಸನಾತ್ ತಂಡುನೋದಿತಮ್
ಭರತಾಯತತಃ ಖ್ಯಾತಂ ಲೋಕೇತಾಂಡವಸಂಜ್ಞಯಾ ||೭೩||
ಪ್ರಾಯೋ ನಿರ್ವರ್ತ್ಯ ತೇಪುಂಭಿರಂಗಹಾರೈಸ್ತದುದ್ಧತೈಃ
ಪ್ರಯೋಗಸ್ಸೂಚ್ಯತೇ ತಜ್ಞೈಃ ತಸ್ಯೋತ್ಸಾಹಾದಿಗೋಚರಃ ||೭೪||

ಅನುವಾದ — ಉದ್ಧತವು ಮಹೇಶ್ವರನ ಆಜ್ಞೆಯಿಂದ ತಂಡುವು ಭರತಮುನಿಗೆ ಹೇಳಿದುದಾದ ಕಾರಣ ಲೋಕದಲ್ಲಿ ತಾಂಡವ ಎಂಬ ಹೆಸರು ಬಂದಿದೆ. ಅದನ್ನು ಪ್ರಾಯಿಕವಾಗಿ ಉದ್ಧತವಾದ ಅಂಗಹಾರಗಳಿಂದ ಗಂಡಸರು ಮಾಡುತ್ತಾರೆ. ಉತ್ಸಾಹ ಮೊದಲಾದ ಭಾವಗಳಲ್ಲಿ ಅದನ್ನು ಪ್ರಯೋಗಿಸತಕ್ಕದ್ದು ಎಂಬುದಾಗಿ ತಿಳಿದವರು ಹೇಳುತ್ತಾರೆ.

(ನೃತ್ತರತ್ನಾವಲಿಗೆ ನೀಡಿದ ಪಾರಿಭಾಷಿಕಾರ್ಥಗಳ ಎರಡನೆಯ ಭಾಗದಲ್ಲಿ ಅಂಗಹಾರ, ಉದ್ಧತ, ತಾಂಡವಗಳಿಗೆ ಪರಿಭಾಷೆಯನ್ನು ನೀಡಿದೆ)

ಇತಿ ಶ್ರೀ ಮನ್ಮಹಾರಾಜಾಧಿರಾಜ ಗಣಪತಿದೇವ ಗಜಸಾಧನಿಕ ಜಾಯಸೇನಾಪತಿ ವಿರಚಿತಾಯಾಂ ನೃತ್ತರತ್ನಾವಲ್ಯಾಂ ನರ್ತನ ವಿವೇಕೋನಾಮ ಪ್ರಥಮೋಧ್ಯಾಯಃ

ಇದು ಶ್ರೀ ಮನ್ಮಹಾರಾಜಾಧಿರಾಜನಾದ ಗಣಪತಿದೇವನ ಗಜಸಾಧನಿಕ ಜಾಯಸೇನಪಾತಿಯು ರಚಿಸಿದ ನೃತ್ತರನಾವಳಿಯಲ್ಲಿ ನರ್ತನವಿವೇಕ ಎಂಬ ಮೊದಲ ಅಧ್ಯಾಯ.

ಪರಿಭಾಷೆಗಳು —

#.. ರೂಪಕ - ಉಪರೂಪಕಗಳು — (ನಾಟಕವೆಂಬುದು ದಶರೂಪಕಗಳಲ್ಲಿ ಒಂದು. ರೂಪಕಗಳು ಆಧುನಿಕ ಕಾಲದಲ್ಲಿ ನಾಟಕವೆಂಬ ಶಬ್ದದಲ್ಲಿಯೇ ಪ್ರಚಲಿತವಿವೆ. ನಾಟ್ಯವು ರಸ ಪ್ರಧಾನವಾದುದು. ರಸವನ್ನು ಆಶ್ರಯಿಸಿದ ಶುದ್ಧರೂಪಕಗಳು ಹತ್ತು ಮಾತ್ರ, ಉಳಿದವು ಉಪರೂಪಕಗಳು, ಅವುಗಳನ್ನು ರೂಪಕಗಳೊಡನೆ ಸೇರಿಸಬಾರದೆನ್ನುತ್ತಾನೆ ಧನಂಜಯ. ನಾಟ್ಯದಲ್ಲಿ ತಾಂಡವ(ಉದ್ಧತ) ಮತ್ತು ಲಾಸ್ಯ(ಮಧುರ, ಸುಕುಮಾರ) ವೆಂದು ಎರಡು ಬಗೆ. ಭಾವದ ವಿವಿಧ ಸ್ಥಿತಿಗಳ ಅನುಕರಣವೂ, ಆಂಗಿಕ, ವಾಚಿಕ, ಆಹಾರ್ಯಕ (ವೇಷಭೂಷಣಗಳಿಂದ ಮಾಡುವ ಅಭಿನಯ) ಮತ್ತು ಸಾತ್ತ್ವಿಕ ಎಂಬ ಚತುರ್ವಿಧ ಅಭಿನಯಗಳಿಂದ ರೂಪಕಗಳಲ್ಲಿ ಚಿತ್ರಿತವಾದ ಧೀರೋದಾತ್ತ, ಧೀರೋದ್ಧತ, ಧೀರಲಲಿತ, ಧೀರಶಾಂತ ಎಂಬ ನಾಲ್ಕು ರೀತಿಯಾದ ನಾಯಕರ ಮತ್ತು ಸ್ವಕೀಯಾ, ಪರಕೀಯಾ, ಸಾಧಾರಣಾ ಮೊದಲಾದ ಅನೇಕ ವಿಭಾಗಗಳುಳ್ಳ ನಾಯಿಕೆಯರ ಅವಸ್ಥೆಗಳನ್ನು ಅಭಿನಯಗಳ ಮೂಲಕ ಅನುಕರಿಸಿ ತೋರಿಸುವುದೇ ನಾಟ್ಯ. ನೀಲ ಕೆಂಪು ಇತ್ಯಾದಿ ಬಣ್ಣದಂತೆ ನಾಟ್ಯವು ದೃಶ್ಯವಾದುದರಿಂದ (ಕಣ್ಣೆದುರೇ ತೋರಿಸಲ್ಪಡುವುದರಿಂದ) ಅದನ್ನು ರೂಪವೆಂದು ಹೇಳುತ್ತಾರೆಂದು, ರೂಪಕಾಲಂಕಾರದಲ್ಲಿ ಮುಖಚಂದ್ರ ಎಂದು ಮುಖದಲ್ಲಿ ಚಂದ್ರನ ಆರೋಪವನ್ನು

Copyright protected

ಮಾಡಿಕೊಳ್ಳುವಂತೆ ನಾಟ್ಯವಾಡುತ್ತಿರುವ ನಟರಲ್ಲಿ ರಾಮಾದಿ ಪಾತ್ರಗಳ ಅವಸ್ಥೆಯ ಆರೋಪವನ್ನು ಮಾಡುವುದರಿಂದ ನಾಟ್ಯವನ್ನು ರೂಪಕವೆಂದು ಹೇಳುತ್ತಾರೆಂದು ಧನಂಜಯನು ರೂಪಕಕ್ಕೆ ಲಕ್ಷಣವನ್ನು ನೀಡುತ್ತಾನೆ. ಇಂದ್ರ, ಪುರಂದರ, ಶಕ್ರ ಎಂಬ ಮೂರೂ ಶಬ್ದಗಳು ಹೇಗೆ ಒಬ್ಬನನ್ನೇ ಹೇಳುತ್ತವೆಯೊ ಹಾಗೆಯೇ ಸ್ವಲ್ಪ ಅರ್ಥವ್ಯತ್ಯಾಸವಿದ್ದರೂ ನಾಟ್ಯ, ರೂಪ, ರೂಪಕ ಎಂಬ ಮೂರು ಶಬ್ದಗಳನ್ನು ಒಂದೇ ಅರ್ಥದಲ್ಲಿ ಪ್ರಯೋಗಿಸಲಾಗುತ್ತಿತ್ತು. ಭಾವಾರ್ಥಾಭಿನಯವನ್ನು ಒದಗಿಸುವುದರಿಂದ ತಾಂಡವ ಹಾಗೂ ಲಾಸ್ಯವನ್ನು ಒಳಗೊಂಡ ನೃತ್ತ, ನೃತ್ಯಗಳು ನಾಟಕ ಮೊದಲಾದ ದಶರೂಪಕಗಳಿಗೆ ಸಹಾಯಕವಾಗಿ ಉಪಕರಿಸುತ್ತವೆ. ರೂಪಗಳು ಹಾಗೂ ಉಪರೂಪಕಗಳಿಗೆ ಸಹಾಯವಾಗುವ ಲಾಸ್ಯಕ್ಕೆ ಹತ್ತು ಅಂಗಗಳು. ಅವು - ಗೇಯಪದ, ಸ್ಥಿತಪಾಠ್ಯ, ಆಸೀನ, ಪುಷ್ಪಗಂಡಿಕಾ, ಪ್ರಚ್ಛೇದಕ, ತ್ರಿಮೂಢ, ಸೈಂಧವ, ದ್ವಿಮೂಢ, ಉತ್ತಮೋತ್ತಮ, ಉಕ್ತಪ್ರತ್ಯುಕ್ತ. ಇವುಗಳಲ್ಲಿ ಕೆಲವನ್ನು ಅಲ್ಪಸ್ವಲ್ಪ ವ್ಯತ್ಯಾಸದ ಹೆಸರುಗಳಲ್ಲಿ ಅನೇಕ ಲಾಕ್ಷಣಿಕರು ಲಕ್ಷಿಸಿದ್ದಾರೆ.

ಈ ರೂಪಕಗಳ ದೃಶ್ಯಗಳಿಗೆ ಹೊಂದುವಂತೆ ಕವಿಗಳು ಶಾಸ್ತ್ರೀಯವಾಗಿ, ರಾಗ (ಜಾತಿ), ತಾಳ, ಛಂದಸ್ಸುಗಳಿಗೆ ನಿಬದ್ಧವಾಗಿಯೇ ಕಾವ್ಯವನ್ನು ರಚಿಸಬೇಕೆಂಬ ತಂತ್ರಗಳೂ ನಿಯಮಗಳೂ ಅತ್ಯಂತ ಪ್ರಾಚೀನದಿಂದಲೇ ಇದ್ದವು. ಪ್ರತಿಯೊಂದು ಕಾವ್ಯ - ರೂಪಕ ನಿಯಮಗಳಿಗೂ ಪರಿಭಾಷೆಗಳು ಹಾಗೂ ಅವುಗಳಿಗೆ ಲಕ್ಷಣಗಳನ್ನು ಭರತಮುನಿಯು ನೀಡಿದ್ದಾನೆ. ಈ ನೃತ್ತನಾಟಕ - ಗೇಯನಾಟಕಗಳ ಲಕ್ಷಣಗಳಿಗಾಗಿ ಭರತಮುನಿಯು ನಾಟ್ಯಶಾಸ್ತ್ರದಲ್ಲಿ ಒಂದು ಇಡೀ ಅಧ್ಯಾಯವನ್ನು ಮೀಸಲಿಟ್ಟಿದ್ದಾನೆ. ಆತನಿಗಿಂತಲೂ ಪೂರ್ವದಲ್ಲಿಯೇ ನಾರದಾದಿ ಮಹರ್ಷಿಗಳು ಇದನ್ನು ಹೇಳಿದ್ದಾರೆಂದು ಭರತಮುನಿಯೇ ಹೇಳಿದ್ದಾನೆ. ಈ ಗೇಯ (ಸಂಗೀತವನ್ನಳವಡಿಸಿದ) ರೂಪಕಗಳಿಗೆ ತಾಳಪ್ರಧಾನ ಪ್ರಬಂಧಗಳಾಗಿದ್ದ ಋಕ್, ಗಾಥಾ, ಪಾಣಿಕಾ ಮತ್ತು ಏಳು ತರಹದ ಧ್ರುವಾಗೀತಗಳನ್ನು ಬಳಸಲಾಗುತ್ತಿತ್ತು. ಇವುಗಳ ಅಂಗಗಳನ್ನು ಆಯ್ದು, ಅವುಗಳಿಂದ ಬೇರೆ ಬೇರೆ ಛಂದಸ್ಸಿನ ವೃತ್ತಗಳನ್ನು ರಚಿಸಿ ಅವಕ್ಕೆ ಕಾವ್ಯತ್ವವನ್ನು ಒದಗಿಸಲಾಗುತ್ತಿತ್ತು. ಧ್ರುವಾಗಳು ಒಳಗೊಳ್ಳುವ ಮಾತುಗಳು, ವರ್ಣಗಳು, ಅಲಂಕಾರ, ಲಯ, ಜಾತಿ (ರಾಗ) ಮತ್ತು ಪಾಣಿಗಳು (ತಾಳವ್ಯವಹಾರದಲ್ಲಿ ಕೈಗಳ ವಿಕ್ಷೇಪಗಳು, ಘಾತ ಇತ್ಯಾದಿ) ನಿಯತವಾಗಿ ಇಂತಿಷ್ಟೇ ಎಂದು ಇರುತ್ತಿದ್ದವು. ಇದರಲ್ಲಿ ವರ್ಣನೆಯ ವಸ್ತುವು ಕನಿಷ್ಠದಲ್ಲಿ ಒಂದು, ಗರಿಷ್ಠದಲ್ಲಿ ನಾಲ್ಕಿರುತ್ತಿದ್ದವು. ಇವುಗಳನ್ನು ಕ್ರಮವಾಗಿ ಧ್ರುವಾ, ಪರಿಗೀತಿಕಾ, ಮದ್ರಕ ಮತ್ತು ಚತುಷ್ಪದಿ ಎಂದು ಕರೆಯುತ್ತಿದ್ದರು. ನಾಟಕದ ಎಂದರೆ, ರೂಪಕಗಳ ಯಾವ ಸಂದರ್ಭದಲ್ಲಿ ಈ ಹಾಡುಗಳನ್ನು ಉಪಯೋಗಿಸಬೇಕಾಗಿತ್ತು ಎಂಬುದರ ಮೇಲೆ ಇವುಗಳನ್ನು ಪ್ರವೇಶ, ಆಕ್ಷೇಪ, ನಿಷ್ಕ್ರಾಮ, ಪ್ರಾಸಾದ ಮತ್ತು ಅಂತರಗಳೆಂದು ವಿಂಗಡಿಸಲಾಗಿತ್ತು. ಇಂತಿಂತಹ ವಿಷಯಗಳನ್ನು ಕುರಿತು ಧ್ರುವಾಗಳನ್ನು ರಚಿಸಬೇಕೆಂಬ ನಿಯಮಗಳ ಅವುಗಳನ್ನು ನಿರ್ವಹಿಸುವ ಪಾತ್ರಗಳೂ ಇಂತಿಂತಹವೇ ಇರಬೇಕೆಂಬ ಕಟ್ಟುಪಾಡೂ ಇದ್ದು, ಧ್ರುವಾಗಳನ್ನು ಇಂತಹುದೇ ರಸ, ಲಯ, ವೃತ್ತ, ಸಂದರ್ಭ, ಸಮಯ, ಭಾಷೆ ಮುಂತಾದುವುಗಳಲ್ಲಿ ಹಾಡಬೇಕೆಂಬ ವಿಧಿಗಳೂ ನಿಯಮಿಸಲ್ಪಟ್ಟಿದ್ದವು. ನಾಟ್ಯಶಾಸ್ತ್ರದಲ್ಲಿ ದೇವ - ದೇವತೆಗಳಿಗೆ, ರಾಜ - ರಾಣಿಯರಿಗೆ, ವೇಶ್ಯೆ - ದಾಸಿಯರಿಗೆ, ಕುಬ್ಜವಾಮನರು ಮುಂತಾದ ಪಾತ್ರಗಳಿಗೆ, ಸಂದರ್ಭಕ್ಕೆ ತಕ್ಕಂತೆ ಸಂಸ್ಕೃತ, ಪ್ರಾಕೃತ, ಶೌರಸೇನೀ, ಸೈಂಧವ, ಪಿಶಾಚೀ, ಮಾಗಧೀ, ಶಾಕಾರೀ ಮುಂತಾದ ಭಾಷೆಗಳ ಗೀತಗಳಿರಬೇಕೆಂಬ ನಿಯಮಗಳನ್ನು ಈ ರೂಪಕಗಳಿಗೆ ಹೇಳಲಾಗಿದೆ. ದಶರೂಪಕಗಳು, ಅವುಗಳ ಇತಿವೃತ್ತ, ಅವುಗಳ ಅವಸ್ಥೆಗಳು, ಇದಕ್ಕಿರುವ ಐದು ಸಂಧಿಗಳ ಅವಶ್ಯಕತೆ, ಅವುಗಳ ಐದು ಅರ್ಥಪ್ರಕೃತಿಗಳು, ಐದು ಸಂಧಿಗಳು, ಈ ಸಂಧಿಗಳ ಪ್ರಯೋಗ, ಈ ಸಂಧಿಗಳ ಅಂತರಗಳು, ಸಂಧಿಯ ಅಂಗಗಳು, ಅವುಗಳ ಲಕ್ಷಣಗಳು, ಅರ್ಥಪ್ರಕೃತಿಗಳನ್ನು ಹೊಂದಿಸುವ ವಿಧಾನಗಳು ಮುಂತಾಗಿ ಇವೆಲ್ಲಕ್ಕೂ ನಾಟ್ಯಶಾಸ್ತ್ರದಲ್ಲಿ ನಿರೂಪಿತವಾದ ಲಕ್ಷಣಗಳು ಆಗಿನ ಕಾಲದಲ್ಲಿ ನಾಟ್ಯ - ನಾಟಕರಂಗಭೂಮಿಯು ಆಳವಾದ ಶಾಸ್ತ್ರವನ್ನುಳ್ಳದ್ದಾಗಿ, ಕಾವ್ಯದಲ್ಲಿಯೂ, ರಂಗಪ್ರಯೋಗದಲ್ಲಿಯೂ, ಎಷ್ಟು ಶಿಷ್ಟವಾಗಿ ಶಿಸ್ತಿನೊಳಪಟ್ಟದ್ದಾಗಿತ್ತು ಎಂಬುದರ ಅರಿವನ್ನುಂಟು ಮಾಡುತ್ತದೆ. ಭರತಮುನಿಯು ರೂಪಕಕ್ಕೆ ಕಾವ್ಯದ ವಸ್ತುವನ್ನು ರಚಿಸಿ ಬೆಳೆಸಬೇಕಾದ ಕವಿಗಳು ಯಾವ ಯಾವ ನಿಯಮಗಳನ್ನು ಅನುಸರಿಸಬೇಕೆಂದು ಹೇಳಿ ಅವುಗಳನ್ನು ನಾಟ್ಯಶಾಸ್ತ್ರದ 'ಸಂಧ್ಯಂಗವಿಕಲ್ಪವೆಂಬ ಅಧ್ಯಾಯದಲ್ಲಿ ಲಕ್ಷಿಸಿ, ನಿರೂಪಿಸಿದ್ದಾನೆ. ಈ ಅಧ್ಯಾಯದಲ್ಲಿ ರೂಪಕಗಳನ್ನು ಅಭಿನಯಿಸಲು ಇರುವ ಅವಶ್ಯಕತೆಗೆ ತಕ್ಕಂತೆಯೂ, ಆಯಾ ರೂಪಕಗಳ ಲಕ್ಷಣಗಳಿಗೆ ತಕ್ಕಂತೆ ಐದು ಅವಸ್ಥೆಗಳನ್ನೂ, ಅವುಗಳಿಂದ ಹೊರಡುವ ಐದು ಸಂಧಿಗಳನ್ನು, ಇಪ್ಪತ್ತೊಂದು ಸಂಧ್ಯಂತರಗಳನ್ನೂ, ಅರವತ್ತನಾಲ್ಕು ಅಂಗಗಳನ್ನೂ, ಮೂವತ್ತಾರು ಲಕ್ಷಣಗಳಿಂದ ಕೂಡಿದ ಗುಣ - ಅಲಂಕಾರಗಳನ್ನೂ, ಮಹಾಪುರುಷರ ಮಹಾರಸವನ್ನು ಜನಿಸುವ ಉದಾತ್ತ ವಚನಗಳನ್ನು ಜನರಿಗೆ ಪ್ರಿಯವಾಗುವಂತೆ ಮೃದು ಶಬ್ದಗಳನ್ನು ಬಳಸಿ, ಸಂಧಿಗಳು ಸರಿಯಾಗಿ ಹೊಂದುವಂತೆ, ಕವಿಯು ಕಾವ್ಯ / ನಾಟಕವನ್ನು ಬರೆಯಬೇಕೆಂದು ಭರತಮುನಿಯು ಹೇಳುತ್ತಾನೆ. ಅವುಗಳ ಪರಿಭಾಷೆಗಳ ಅರ್ಥಗಳನ್ನು ಉದಾಹರಣೆಗಳ ಮೂಲಕ

Copyright protected

ಅರಿಯದೆ ಈ ಅಧ್ಯಾಯವನ್ನು ಅರ್ಥಮಾಡಿಕೊಳ್ಳಲು ಅಸಾಧ್ಯವೇ ಸರಿ. ಸಂಧ್ಯಂಗವಿಕಲ್ಪವೆಂಬ ಈ ಅಧ್ಯಾಯದ ಪರಿಭಾಷೆಗಳನ್ನೂ ಅವಕ್ಕೆ ಧನಂಜಯನು ನೀಡಿರುವ ಉದಾಹರಣೆಗಳನ್ನೂ ಅಭ್ಯಾಸ ಮಾಡಲೇಬೇಕು. 10 ನೆಯ ಶತಮಾನದಲ್ಲಿ ರಚಿತವಾದ ಧನಂಜಯನ ದಶರೂಪಕವು ನಾಟ್ಯಶಾಸ್ತ್ರ ಪ್ರಪಂಚದಲ್ಲಿ ಮಹತ್ವಪೂರ್ಣವಾದ ಗ್ರಂಥವಾಗಿದೆ. ಈ ಗ್ರಂಥವು ಭರತಮುನಿಯ ನಾಟ್ಯಶಾಸ್ತ್ರದ ಸಂಕ್ಷಿಪ್ತವಾದರೂ ಸರ್ವಾಂಗೀಣ ವಿವೇಚನೆಯನ್ನು ಒಳಗೊಂಡಿದ್ದು ಆನಂತರ ರಚಿತವಾದ ಪ್ರತಾಪರುದ್ರೀಯ, ಏಕಾವಲೀ, ಸಾಹಿತ್ಯದರ್ಪಣ, ನಾಟ್ಯದರ್ಪಣ, ರಸಮಂಜರೀ ಮುಂತಾದವುಗಳಿಗೆ ಆಶ್ರಯವಾಗಿದೆ. ದಶರೂಪಕ ಗ್ರಂಥಕ್ಕೆ ಧನಂಜಯನ ಸಹೋದರನಾದ ಧನಿಕನು 'ಅವಲೋಕ' ವೆಂಬ ವ್ಯಾಖ್ಯೆಯನ್ನು ಬರೆದು ರಂಗಭೂಮಿ ಪ್ರಪಂಚಕ್ಕೆ ಉಪಕರಿಸಿದ್ದಾನೆ. ದಶರೂಪಕ ಗ್ರಂಥವು ಒಳಗೊಂಡಿರುವ ಉದಾಹರಣೆಗಳಿಂದ ಬಹು ಉಪಯುಕ್ತವಾಗಿದೆ. ನೀಡಿರುವ ಉದಾಹರಣೆಗಳು ಹೆಚ್ಚು ಪ್ರಸಿದ್ಧ ನಾಟಕಗಳಾದ ಭಟ್ಟ ನಾರಾಯಣನ ವೇಣೀಸಂಹಾರ ಹಾಗೂ ಶ್ರೀಹರ್ಷನ ರತ್ನಾವಳಿಯವೇ ಆಗಿವೆ.

#.. ನರ್ತನ — ಗ್ರೀಕ್ ನಾಟಕಗಳು ಪ್ರಾಚೀನವೆಂದು ವಿದ್ವಾಂಸರು ಹೇಳುತ್ತಾರೆ. ಆದರೆ ಕ್ರಿಸ್ತಪೂರ್ವದಲ್ಲಿ 6- 4 ನೆಯ ಶತಮಾನದಲ್ಲಿಯೆ ಭರತನಿಗಿಂತಲೂ ಹಿಂದೆಯೇ, ಪಾಣಿನಿಯು 'ನಟ್' ಧಾತುವಿವೇಚನಾ ಮೂಲಕವಾಗಿ ಕೃಶಾಶ್ವ ಶೈಲಾಲಿನ್ ಎಂಬ ಪೂರ್ವಾಚಾರ್ಯ ಕೃತ ನಟಸೂತ್ರವೆಂಬ ಗ್ರಂಥವೊಂದರ ಹೆಸರನ್ನು ಹೇಳುತ್ತಾನೆ. ಶಿಲಾಲಿಯೆಂಬುದು ನಟಸೂತ್ರವನ್ನು ರಚಿಸಿದವನ, ವೇದಸಂಪ್ರದಾಯವೊಂದರ ಹಾಗೂ ಅದರ ನಾಟ್ಯಪರಂಪರೆಯೊಂದರ ಪ್ರವರ್ತಕನ ಹೆಸರು ಎಂದು ಪಾಣಿನಿಯು ಹೇಳುತ್ತಾನೆ. ಋಗ್ವೇದದ ಚರಣವೊಂದರಲ್ಲಿ ಬೆಳೆದು ಬಂದ ಈ ಪರಂಪರೆಯ ಬ್ರಾಹ್ಮಣರನ್ನು ಶ್ರೌತಸೂತ್ರಾದಿ ಗ್ರಂಥಗಳು ಗುರುತಿಸುತ್ತದೆ. ಕ್ರಿ. ಪೂ. 5 - 6 ನೆಯ ಶತಮಾನದಲ್ಲಿದ್ದವನೆಂದು ವಿದ್ವಾಂಸರು ಹೇಳುವ ಪಾಣಿನಿಯು ನಟ, ನರ್ತಕ, ನೃತ್ಯ, ನಾಟ್ಯ ಇವುಗಳ ಉಲ್ಲೇಖವನ್ನು ಮಾಡುತ್ತಾನೆ. ನಾಟ್ಯವೆಂಬುದು ನಟ್ ಎಂಬ ಮೊದಲನೆಯ ಭ್ವಾದಿಗಣಕ್ಕೆ ಸೇರಿದ ಪರಸ್ಮೈಪದಿ ಧಾತುವಿನಿಂದ ಶಬ್ದ. ನೃತ್ತ, ನೃತ್ಯ, ಮತ್ತು ನರ್ತನಗಳು ನೃತ್ ಎಂಬ ನಾಲ್ಕನೆಯ ದಿವಾದಿಗಣಕ್ಕೆ ಸೇರಿದ ಪರಸ್ಮೈಪದಿ ಧಾತುವಿನಿಂದ ಆದ ಶಬ್ದಗಳು. ಇವುಗಳಲ್ಲಿ ನೃತ್ ಎಂಬುದು ಸಂಸ್ಕೃತವಾಙ್ಮಯದ ಪ್ರಾಚೀನತಮ ಕಾಲದಿಂದಲೂ ಹಲವಾರು 'ಲ' ಕಾರಗಳಲ್ಲಿ ದೊರೆಯುತ್ತದೆ. 'ಅನರ್ತಿಷುಃ, ನೃತುಃ, ನೃತಮಾನ, ನೃತ್' ಇತ್ಯಾದಿ ಅರ್ವಾಚೀನದಲ್ಲಿಯೂ ಪ್ರಯೋಗ ಪ್ರಸಿದ್ಧಿಯನ್ನು ಪಡೆದ ಈ ಶಬ್ದಗಳ ರೂಪಗಳು ಕುಣಿ, ಆಡು ಎಂಬ ಅರ್ಥಗಳಲ್ಲಿ ಋಗ್ವೇದ, ಅಥರ್ವವೇದಗಳಲ್ಲಿ ಕಂಡು ಬರುತ್ತವೆ. ಚುರುಕು ಚಪಲತೆಯಿಂದ ಕೂಡಿದ ಅಥವಾ ಕುಣಿತದಲ್ಲಿ ತೊಡಗಿರುವ ಉಷಸ್, ಇಂದ್ರ, ಅಶ್ವಿನಿ ಮುಂತಾದ ದೇವತೆಗಳನ್ನು ಋಗ್ವೇದದಲ್ಲಿ 'ನೃತು' ಎಂದು ವ್ಯವಹರಿಸಿದೆ. ರಾಮಾಯಣದಲ್ಲಿಯೂ ನಾಟಕಶಬ್ದದ ಹಾಗೂ ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ನಟ, ನಾಟ್ಯಶಬ್ದದ ಉಲ್ಲೇಖಗಳಿವೆ. 'ವಾದಯಂತಿ ತಥಾ ಶಾಂತಿ ಲಾಸಯಂತ್ಯಪಿ ಚಾಪರೇ….. ನಾಟಕಾನ್ಯ ಪರೇ ಪ್ರಾಹುಃ' ಎಂದು ರಾಮಾಯಣದಲ್ಲಿ ನೃತ್ಯ, ನೃತ್ತ ಮತ್ತು ನರ್ತನಗಳಿಂದ ಭಿನ್ನವಾಗಿ ನಾಟಕವನ್ನು ಹೇಳಿರುವುದು ಈ ಶಬ್ದ ಇತಿಹಾಸದಲ್ಲಿ ಒಂದು ಮೈಲಿಗಲ್ಲು ಎಂದು ಹೇಳಬಹುದು. ರಾಮಾಯಣದಲ್ಲಿ ನಟನರ್ತಕರನ್ನು ಕುರಿತಾಗಿ ಇರುವ ಶ್ಲೋಕಗಳಾದ 'ಗಣಕಾನ್ ಶಿಲ್ಪಿನಶ್ಚೈವ ತಥೈವ ನಟನರ್ತಕಾನ್' –' ನಟನರ್ತಕಸಂಕುಲಾಃ ಗಾಯನೈಶ್ಚ ವಿರಾವಿಣ್ಯಃವಾದನೈಶ್ಚ' - ಇವುಗಳಿಂದ ನಟನೆಂದರೆ ಲೋಕಚರಿತದ ಅನುಕರಣವನ್ನು ಪ್ರಧಾನವಾಗಿ ವಾಚಿಕಾಭಿನಯದಿಂದಲೂ ಗೌಣವಾಗಿ ಆಂಗಿಕ ಸಾತ್ತ್ವಿಕಾಹಾರ್ಯಾದಿ ಅಭಿನಯಗಳಿಂದಲೂ ರಂಗದ ಮೇಲೆ ಆಡಿ ತೋರಿಸುವವನು ಎಂದೂ, ನರ್ತಕನೆಂದರೆ ಆಂಗಿಕಾಭಿನಯ ಪ್ರಧಾನವಾಗಿ ಅಂಗವಿಕ್ಷೇಪಾದಿಗಳಿಂದಲೂ ಆಹಾರ್ಯದಿಂದಲೂ ಸಾತ್ತ್ವಿಕಾಭಿನಯವನ್ನು ಎಂದರೆ ರಸಪ್ರತೀತಿಯನ್ನು ಉಂಟುಮಾಡುವವನು, ಕೇವಲ ಕುಣಿಯುವವನು ಎಂದು ಅರ್ಥ ಹೊರಡುವ ಈ ಶ್ಲೋಕಗಳು ಅತ್ಯಂತ ಪ್ರಾಚೀನದಿಂದಲೂ ರಂಗಭೂಮಿಯಲ್ಲಿ ಪ್ರತ್ಯೇಕವಾಗಿಯೂ ನಾಟಕಾದಿಗಳಲ್ಲಿಯೂ ನಾಟ್ಯ ನರ್ತನಗಳು ಪ್ರಯೋಗವಾಗುತ್ತಿದ್ದ ಇತಿಹಾಸವನ್ನು ಹೇಳುತ್ತವೆ. ಮಹಾಭಾರತದಲ್ಲಿಯೂ 'ನಟನರ್ತಕೈಃ ಶೋಭಿತಃ' –'ನಟನರ್ತಕಾನ್' ಮುಂತಾದ ಮಾತುಗಳಿದ್ದು, ಅಲ್ಲಿರುವ ನರ್ತನಾಗಾರ, ನರ್ತನಾಲಯ ಎಂಬ ಮಾತುಗಳು ಆಗಿನ ಕಾಲದಲ್ಲಿಯೇ ನೃತ್ತ ಅಥವಾ ನೃತ್ಯಗಳ ಶಿಕ್ಷಣ ಶಾಲೆ ಅಥವಾ ಪ್ರೇಕ್ಷಾಗೃಹಗಳು ಇದ್ದವೆಂಬುದನ್ನು ಸೂಚಿಸುತ್ತವೆ. ಈ ನರ್ತನಾಗಾರದಲ್ಲಿ ಗಂಧರ್ವರು ಯಾವಾಗಲೂ ಅದೃಶ್ಯರಾಗಿ ನೆಲೆಸಿರುತ್ತಾರೆ ಎಂಬ ಪ್ರಾಚೀನ ತರ ಸಾಂಪ್ರದಾಯಿಕ ನಂಬುಗೆಯನ್ನು ಮಹಾಭಾರತವು ಒಳಗೊಂಡಿದೆ. ಪಾಣಿನಿಯ ಗ್ರಂಥಸಂದರ್ಭದಿಂದಲೂ ಕ್ರಿ. ಪೂ. ಎರಡನೆಯ ಶತಮಾನದಲ್ಲಿದ್ದ ಪತಂಜಲಿಯ ಗ್ರಂಥಸಹಾಯದಿಂದಲೂ ಗೀತವಾದ್ಯನೃತ್ತಾದಿ ಪರಿಕರಗಳಿಂದ ಕೂಡಿದ ನಾಟಕಕ್ಕೆ ನಾಟ್ಯವೆಂಬ ಅರ್ಥವೂ ಇದೆಯೆಂದು ತಿಳಿಯಬಹುದು. ಆದ್ದರಿಂದ

Copyright protected

ಗ್ರೀಕರ ನಾಟಕಗಳಿಗಿಂತಲೂ ಪೂರ್ವದಿಂದಲೇ ಭಾರತೀಯ ಇತಿಹಾಸದಲ್ಲಿ ನಾಟಕವು ಹೆಚ್ಚು ಶಾಸ್ತ್ರೀಯವಾಗಿಯೇ ಪ್ರಚಲಿತವಿತ್ತೆಂಬುದನ್ನು ತಿಳಿಯಬಹುದು.

#.. ಉತ್ಸಾಹ ಭಾವ — ರತಿ, ಹಾಸ, ಶೋಕ, ಕ್ರೋಧ - ಉತ್ಸಾಹಗಳು, ಭಯ ಹಾಗೆಯೇ ಜುಗುಪ್ಸೆ, ವಿಸ್ಮಯ ಇವುಗಳು ರಸಗಳಿಗೆ ಆಶ್ರಯಗಳಾದ ಸ್ಥಾಯಿಭಾವಗಳು ಎಂದು ನರ್ತನನಿರ್ಣಯದ ನಾಲ್ಕನೆಯ ಪ್ರಕರಣವಾದ ನರ್ತಕ (ನರ್ತನ) ಅಧ್ಯಾಯದ 151ಯ ಶ್ಲೋಕವು ಹೇಳುತ್ತದೆ. "ರತ್ಯಾದಿ ಸ್ಥಾಯಿಭಾವಗಳ ನಿರೂಪಣೆಯಲ್ಲಿ ಪಂಡರೀಕವಿಠ್ಠಲನು ನಾಟ್ಯಶಾಸ್ತ್ರದಲ್ಲಿ ರುವ ಸಮಾನಗ್ರಂಥಾಂಶದ ಶ್ಲೋಕಗಳನ್ನು ಮಾತ್ರ ಉದ್ಧರಿಸಿಕೊಂಡು ಗದ್ಯದಲ್ಲಿ ಹೇಳಿರುವುದನ್ನು ಉಪೇಕ್ಷಿಸಿದ್ದಾನೆ. ವಿಷಯಸಂಪೂರ್ತಿಗೆಂದು ನಾಟ್ಯಶಾಸ್ತ್ರದ ಈ ಭಾಗವನ್ನೂ (VII, 8ವ - 28)ಇಲ್ಲಿ ಸಂಗ್ರಹಿಸಲಾಗುವುದು, " ಎಂದು ರಾ. ಸತ್ಯನಾರಾಯಣರವರು ತಮ್ಮ ಪುಂಡರೀಕಮಾಲಾ ಗ್ರಂಥದ 564 - 567ನೇ ಪುಟಗಳಲ್ಲಿ ಸ್ಥಾಯಿಭಾವಗಳನ್ನು ಕುರಿತು ಹೇಳಿದ್ದಾರೆ. ಅದರಂತೆ ನಾಟ್ಯಶಾಸ್ತ್ರದಲ್ಲಿ 'ಉತ್ಸಾಹ'ವೆಂದರೆ ವಿಷಾದವಿಲ್ಲದಿರುವುದು, ಶಕ್ತಿ, ಧೈರ್ಯ, ಶೌರ್ಯ/ತ್ಯಾಗ, ಶೌರ್ಯ, ಕಾರ್ಯದಲ್ಲಿ ಜಾಣತನಗಳಿರುವುದು. ಪಂಡರೀಕವಿಠ್ಠಲನು ಉತ್ಸಾಹವು ಮನಸ್ಸಿನಲ್ಲಿ ಸಮ್ಮೋಹದ ಅಭಾವದಿಂದ ಹುಟ್ಟುವ ದೃಢ ನಿಶ್ಚಯ ಮತ್ತು ನಯಗಳ ರೂಪದ್ದಾಗಿರುತ್ತದೆ. ಅದನ್ನು ಪ್ರಮಾದವಿಲ್ಲದ ಮನಃಸ್ಥಿತಿ ಇತ್ಯಾದಿಗಳಿಂದ ಅಭಿನಯಿಸಬೇಕು, ಎನ್ನುತ್ತಾನೆ.

ಆದ್ಯ ರಂಗಾಚಾರ್ಯರು ಕನ್ನಡಕ್ಕೆ ಅನುವಾದಿಸಿರುವ ನಾಟ್ಯಶಾಸ್ತ್ರದಲ್ಲಿ ಉತ್ಸಾಹವು ಉತ್ತಮ ಪ್ರಕೃತಿಯದಾದುದು (ಅಂದರೆ ಅಂತಹುದರಲ್ಲಿ ಕಾಣುವುದು). ಇದರ ವಿಭಾವಗಳೆಂದರೆ ವಿಷಾದದ ಅಭಾವ (ಒಂದು ತರಹದ ಆಶಾವಾದ) ಶಕ್ತಿ, ಧೈರ್ಯ, ಶೌರ್ಯ ಮುಂತಾದವು. ಇದನ್ನು ಶೌರ್ಯ, ತ್ಯಾಗ, ಕಾರ್ಯದಲ್ಲಿ ಜಾಣ್ಮೆ ಇಂತಹ ಅನುಭಾವಗಳಿಂದ ಅಭಿನಯಿಸಬೇಕು. ಈ ಬಗ್ಗೆ ಶ್ಲೋಕವಿದೆ : ಮನಸ್ಸಿನಲ್ಲಿ ಯಾವ ತರದ ಗೊಂದಲವೂ ಇಲ್ಲದೆ ನಯ ಮತ್ತು ದೃಢ ನಿಶ್ಚಯಗಳನ್ನು ತೋರಿಸುವುದು ಉತ್ಸಾಹದ ಲಕ್ಷಣ. ತಪ್ಪು ಮಾಡದೆ ಕೆಲಸವನ್ನು ಮಾಡುವಂತಹದರಿಂದ ಅದನ್ನು ಅಭಿನಯಿಸಬೇಕು — ಎಂದಿದೆ.

#.. ವೃತ್ತಿ — ವೃತ್ತಿಯೆಂದರೆ ನೇಪಥ್ಯ, ಗೀತ, ವಾದ್ಯ, ರಸ, ಭಾವ, ಅಭಿನಯಗಳು ಸೇರಿದ್ದು. ನೃತ್ಯ ಜಾತಿಗಳಲ್ಲಿ ಏನಾದರೂ ವಿಶೇಷವಿರುವುದು (ವರ್ತನ) ; ಅಥವಾ ವಿಲಾಸದ ವಿನ್ಯಾಸದ ಕ್ರಮ. ಸಾಗರನಂದಿಯು (ನಾಟಕರತ್ನಕೋಶ. ಶ್ಲೋ. 1044 ಮತ್ತು ಮುಂದಕ್ಕೆ) ಅದನ್ನು ಹೀಗೆ ನಿರೂಪಿಸುತ್ತಾನೆ : 'ನೇಪಥ್ಯೋ ಗೀತವಾದಿತರಸಭಾವಾಭಿನಯನೃತ್ಯಜಾತೀನಾಂ ಕ್ವಾಪಿ ವಿಶೇಷೇ ವರ್ತನಮಿತಿ ವೃತ್ತಿಃ ಕಥಿತಃ । ಅಥವಾ ವಿಲಾಸವಿನ್ಯಾಸಕ್ರಮೋ ವೃತ್ತಿರಿತಿ।' —ಭರತಮುನಿಯು (ನಾಟ್ಯಶಾಸ್ತ್ರಂ XX) ವೃತ್ತಿಗಳ ಹುಟ್ಟು, ಲಕ್ಷಣಗಳನ್ನು ಮೊದಲಬಾರಿಗೆ ವರ್ಣಿಸುತ್ತಾನೆ. ಭಗವಾನ್ ನಾರಾಯಣನು ವಿಶ್ವವನ್ನೆಲ್ಲ ಸಾಗರವನ್ನಾಗಿ ಮಾಡಿ ಲೋಕವನ್ನು ಒಂದು ಬೀಜವನ್ನಾಗಿ ಸಂಕ್ಷಿಪ್ತಗೊಳಿಸಿ (ಹೋಲಿಸಿ : ವಾಲ್ಮೀಕಿರಾಮಾಯಣ, VII, 72, ಕೂರ್ಮಪುರಾಣ, XIII) ಆದಿಶೇಷನನ್ನು ಶಯ್ಯೆಯಾಗಿ ಮಾಡಿಕೊಂಡು ಮಲಗಿದಾಗ ಮಧುಕೈಟಭರೆಂಬ ಅಸುರರು ತಮ್ಮ ಬಲದ ಮದದಿಂದ ತೊಡೆ ತಟ್ಟಿ ಅವನನ್ನು ಯುದ್ಧಕ್ಕೆ ಕರೆದರು, ಮುಷ್ಟಿ, ಮೊಣಕಾಲುಗಳಿಂದ ಗುದ್ದಿದರು. ಆಗ ಅದನ್ನು ನೋಡಿ, ಕೇಳಿದ ಬ್ರಹ್ಮನು 'ಮಾತಿಗೆ ಮಾತು ಬೆಳೆಸಲು ಇದೇನು ಭಾರತೀವೃತ್ತಿಯೇ? ಅವರನ್ನು ಕೂಡಲೇ ಕೊಲ್ಲು' ವಿಷ್ಣುವಿಗೆ ಹೇಳುತ್ತಾನೆ. ವಿಷ್ಣುವು ಅವರೊಂದಿಗೆ ಯುದ್ಧ ಮಾಡುವಾಗ ಬಳಸಿದ ಶುದ್ಧವಾದ ಆಂಗಿಕ ಚಲನೆಗಳಿಂದಲೂ ಅಂಗಹಾರಗಳಿಂದಲೂ ಕೂಡಿದ ಚಲನವಲನಗಳಿಂದ, ಮಾನಸಿಕ ವ್ಯಾಪಾರಗಳಿಂದ ಕೂಡಿ ನ್ಯಾಯಗಳಿಂದ (ಯುದ್ಧ ಸಮಯದಲ್ಲಿ ಬಳಸುವ ಅಸ್ತ್ರವಿಧಾನಗಳಿಂದ) ಹೋರಾಡಿ ಈ ಯುದ್ಧದಲ್ಲಿ ಮಧುಕೈಟಭರೆಂಬ ಆ ರಕ್ಕಸರನ್ನು ಹರಣ ಮಾಡುತ್ತಾನೆ. ಹೀಗೆ ಹರಿಯಿಂದ ಹತರಾದ ರಕ್ಕಸರನ್ನು ನೋಡಿ ಬ್ರಹ್ಮನು ಆ ಶತ್ರುನಾಶಕನಿಗೆ 'ನೀನು ದಾನವರ ನಾಶವನ್ನು ವಿಚಿತ್ರವಾದ, ಸ್ಫುಟವಾದ, ಲಲಿತವಾದ ಅಂಗಾಹಾರಗಳಿಂದ ಮಾಡಿದೆ. ಆದುದರಿಂದ ಲೋಕದಲ್ಲೆಲ್ಲ ಹೋರಾಡುವುದಕ್ಕೆ ಇದೇ ಕ್ರಮವಿರಲಿ. ಶಸ್ತ್ರಗಳನ್ನು ಬಳಸುವುದಾದರೆ, ಇದೇ ರೀತಿಯಲ್ಲಿ ಬಳಸುವುದು ನ್ಯಾಯ. ಆದುದರಿಂದ ಇದಕ್ಕೆ ನ್ಯಾಯ ಎಂಬ ಹೆಸರೇ ಇರಲಿ' ಎಂದು ಹೇಳುತ್ತಾನೆ. ಭಾರತೀವೃತ್ತಿಯು ಭೀಭತ್ಸ ಕರುಣರಸಗಳಿಗೂ, ಸಾತ್ತ್ವತಿಯು ವೀರ, ಅದ್ಭುತ, ಶಮಗಳಿಗೂ, ಕೈಶಿಕಿಯು ಹಾಸ್ಯ ಶೃಂಗಾರಗಳಿಗೂ ಆರಭಟಿಯು ರೌದ್ರ ಭಯಾನಕಗಳಿಗೂ ಆಶ್ರಯವಾಗಿರುತ್ತದೆ.

copyright protected

'ಋಷಿಗಳು ಪಾಠ್ಯಾದಿಗಳಿಂದ ಅಂತಹವೇ ವೃತ್ತಿಗಳನ್ನು ನಿರ್ಮಿಸಿದರು. ವಾಗಾಂಗಗಳ ಅಭಿನಯರೂಪದಲ್ಲಿ ನಾಟ್ಯವೇದದಲ್ಲಿ ಇವು ಹುಟ್ಟಿದವು. ಕಾರ್ಯ (ನಾಟಕ)ದ ಕ್ರಿಯಾ (ಪ್ರಯೋಗ)ಕ್ಕಾಗಿ (ಬಳಸಿಕೊಳ್ಳಲು) ಈ ವೃತ್ತಿಯನ್ನು ನನಗೆ (ಭರತನಿಗೆ) ಒಪ್ಪಿಸಿದನು. ನಾನು ಋಗ್ವೇದದಿಂದ ಭಾರತೀವೃತ್ತಿಯನ್ನೂ, ಯಜುರ್ವೇದದಿಂದ ಸಾತ್ತ್ವತೀವೃತ್ತಿಯನ್ನೂ, ಸಾಮವೇದದಿಂದ ಕೈಶಿಕೀವೃತ್ತಿಯನ್ನೂ, ಅಥರ್ವವೇದದಿಂದ ಆರಭಟೀವೃತ್ತಿಯನ್ನೂ ನಿರ್ಮಿಸಿದೆ' ಎಂದು ಭರತನು ಹೇಳುತ್ತಾನೆ.

#.. ಕೈಶಿಕೀ ವೃತ್ತಿ — ವಿಷ್ಣುವು ಮಧುಕೈಟಭರೆಂಬ ರಾಕ್ಷಸರೊಂದಿಗೆ ಮಾಡಿದ ಯುದ್ಧದಲ್ಲಿ ತೊಡಗಿರುವಾಗಿನ ಸಮಯದಲ್ಲಿ ದೇವನು ವಿಚಿತ್ರವಾದ ಅಂಗಹಾರಗಳಿಂದ ಆಡುತ್ತ ಲೀಲೆಯಿಂದ ಕೂದಲನ್ನು ಗಂಟುಹಾಕಿಕೊಂಡನು. ಈ ಕೇಶಬಂಧನದಿಂದ ಕೈಶಿಕೀವೃತ್ತಿಯು ಹುಟ್ಟಿತು. ಅದರಲ್ಲಿ ವಿಶೇಷವಾಗಿ ಸುಂದರವಾದ, ಮನೋಹರವಾದ ನೇಪಥ್ಯವನ್ನು ಧರಿಸಿದ ಸ್ತ್ರೀಪಾತ್ರಗಳೂ, ಬಹುವಾದ ನೃತ್ತಗೀತಗಳೂ, ಕಾಮ ಸುಖದ ಉಪಭೋಗ. ಉಪಚಾರಗಳೂ ಇರುತ್ತವೆ. ಈ ವೃತ್ತಿಯಲ್ಲೂ ನರ್ಮ, ನರ್ಮಸ್ಫುರ್ಜ (ಸ್ಫುಂರ್ಜ), ನರ್ಮಸ್ಫೋಟ ಮತ್ತು ನರ್ಮಗರ್ಭಗಳೆಂಬ ನಾಲ್ಕು ಬೇಧಗಳಿವೆ.

+.. ನರ್ಮ — ನರ್ಮವು ನವಿರಾದ ಹಾಸ್ಯ, ಶೃಂಗಾರಗಳಿಗೆ ಸಂಬಂಧಿಸಿದ್ದು. ಇದರಲ್ಲಿ ವೀರರಸವಿರುವುದಿಲ್ಲ. ಹೆಚ್ಚಾಗಿ ಹಾಸ್ಯವೇ ಇರುವುದು. ಶುದ್ಧವಾದ ಪ್ರೇಮವಿರುತ್ತದೆ. ಇದರಲ್ಲಿಯೂ ಮೂರು ಪ್ರಕಾರಗಳಿವೆ : ಈರ್ಷ್ಯಾ ಇಲ್ಲವೆ ಕ್ರೋಧಗಳಿಂದ ಪ್ರೇರಿತವಾದದ್ದು, ಪರರನ್ನು ಉಪಲಂಭಿಸುವ (ಟೀಕಿಸುವ) ಮಾತುಗಳನ್ನುಳ್ಳದ್ದು ಮತ್ತು ತನ್ನನ್ನು ತಾನು ಹಳಿದುಕೊಳ್ಳುವುದು.

+.. ನರ್ಮಸ್ಫುರ್ಜ — ಇದರಲ್ಲಿ, ಮೊದಲ ಸಮಾಗಮದಲ್ಲಿ ಒಂದೆಡೆ ವೇಷ - ಮಾತುಗಳಿಂದ ಪರಸ್ಪರ ರತಿ - ಹೆಚ್ಚುವುದು. ಇನ್ನೊಂದೆಡೆ ಕೊನೆಗೆ ಏನಾದೀತು (ಇಲ್ಲವೆ ಯಾರಾದರೂ ನೋಡಿಯಾರು) ಎಂಬ ಭಯವಿರುವುದು.

+.. ನರ್ಮಸ್ಫೋಟ — ನರ್ಮಸ್ಫೋಟವೆಂದರೆ ಬೇರೆ ಬೇರೆ ಭಾವಗಳು ಅಷ್ಟಷ್ಟರ ಮಟ್ಟಿಗೆ ಪೋಷಕವಾಗಿ ಶೃಂಗಾರರಸವು ಪೂರ್ತಿಯಾಗದಿರುವುದು.

+.. ನರ್ಮಗರ್ಭ — ನರ್ಮಗರ್ಭವೆಂದರೆ ಜ್ಞಾನ - ರೂಪ - ಸಡಗರ - ಧನ ಮೊದಲಾದವುಗಳು ಇದ್ದಾಗಲೂ ಕಾರ್ಯವಶಾತ್ ನಾಯಕನು ಪ್ರಚ್ಛನ್ನನಾಗಿ, ರಹಸ್ಯವಾಗಿ ವ್ಯವಹರಿಸುವುದು.

+.. ಚಿತ್ರವೆಂಬ ಪ್ರಬಂಧವನ್ನು ಹೇಳುವಲ್ಲಿ ಚಿತ್ರಕೈಶಿಕೀವೃತ್ತಿಯನ್ನು ಪಂಡರೀಕ ವಿಠ್ಠಲನು ಹೇಳುತ್ತಾನೆ (ನ. ನಿ. ಅಧ್ಯಾಯ 3,ಶ್ಲೋ.116, 117). ಇದು ವೈದರ್ಭೀ ರೀತಿ ಮತ್ತು ಚಿತ್ರಕೈಶಿಕೀವೃತ್ತಿಗಳಿಂದ ಚಿತ್ರವು ಶೃಂಗಾರಭರಿತವಾಗಿ ನಾಲ್ಕುರಸಗಳಲ್ಲಿಯೂ, ನಾನಾ ರೀತಿ - ವೃತ್ತಿಗಳಲ್ಲಿಯೂ ಹಾಡುವಂತಹದು ಎಂದು ಹೇಳಿದ್ದಾನೆ. ಇದು ಸಂಗೀತರತ್ನಾಕರದಲ್ಲಿ ಚಿತ್ರಗದ್ಯಕ್ಕೆ ಅನ್ವಯವಾಗುತ್ತದೆಂದು ಗ್ರಂಥಸಂದರ್ಭದಿಂದ ತಿಳಿಯುತ್ತದೆ. (IV, 190,191). 'ಶೃಂಗಾರೇ ವೈಷ್ಣವಂ ಚಿತ್ರ ಚಿತ್ರಕೈಶಿಕವೃತ್ತಿಜಮ್ ।ವೈಧರ್ಭ್ಯಾ ರಚಿತಮ್ ರೀತ್ಯಾ ನಾನಾರೀತಿವಿಚಿತ್ರಯಾ॥ ಚಿತ್ರಕೈಶಿಕೀವೃತ್ತಿಯೆಂದರೆ ಕೈಶಿಕಿಯು ಭಾರತೀ ಇತ್ಯಾದಿ ಇತರ ವೃತ್ತಿಗಳ ಪ್ರಭಾವದಿಂದ ಬೆರಕೆಯಾಗಿರುವುದು ಎಂದು ಕಲ್ಲಿನಾಥನು ಹೇಳುತ್ತಾನೆ. 'ಕೈಶಿಕವೃತ್ತೇಶ್ಚಿತ್ರತ್ವಂ ಭಾರತ್ಯಾದಿಭಿರ್ವೃತ್ತ್ಯಂತರೈಃ ಸಹ ಸಾಂಕರ್ಯೇತಿ ವೇದಿತವ್ಯಮ್ ।' (ಸಂ. ರ. IV, 190 ರ ವ್ಯಾಖ್ಯಾನ).

.. ವೈದರ್ಭೀ ರೀತಿ — ರೀತಿಗಳು ಕಾವ್ಯದ ಆತ್ಮವೆಂದು ವಾಮನನು ಹೇಳುತ್ತಾನೆ. ರೀತಿಯೆಂದರೆ ವೈಶಿಷ್ಟ್ಯಪೂರ್ಣವಾದ ಪದರಚನೆ. ವೈಶಿಷ್ಟ್ಯವೆಂದರೆ ಕಾವ್ಯದ ಗುಣ. ಅದು ವೈದರ್ಭೀ, ಗೌಡೀಯಾ, ಪಾಂಚಾಲೀ ಎಂದು ಮೂರು ವಿಧ. ವಿದರ್ಭ, ಗೌಡ, ಪಾಂಚಾಲ ದೇಶಗಳ ಕಾವ್ಯಗಳಲ್ಲಿ ಆಯಾ ಪದರಚನಾಗುಣವು ಕಂಡುಬರುತ್ತಿದ್ದರಿಂದ ಈ ಹೆಸರುಗಳನ್ನು ಕೊಟ್ಟಿದ್ದರೂ ವಸ್ತುತಃ ದೇಶಬೇಧದಿಂದ ಈ ರೀತಿಯ ಕಲ್ಪನೆಯು ಸೀಮಿತವಾಗಿಲ್ಲ. ಈ ಲಕ್ಷಣಗಳು ಬೇರೆಲ್ಲಿ ಕಂಡರೂ ಆಯಾ ಹೆಸರು ಅನ್ವಿತವೇ. ಇದರಲ್ಲಿ ವೈದರ್ಭೀಯು ಓಜಸ್ಸು, ಪ್ರಸಾದ ಮೊದಲಾದ ಎಲ್ಲ ಗುಣಗಳನ್ನೂ

Copyright protected

ಹೊಂದಿರುತ್ತದೆ. ದೋಷಗಳಿಲ್ಲದೆ ವೀಣೆಯ ಸ್ವರದ ಹಾಗೆ ಅದು ಸುಂದರ. ಸುಕವಿ, ಸದ್ವಸ್ತು, ವ್ಯಾಕರಣ ಶುದ್ಧಿಗಳು ಇದ್ದರೂ ಯಾವುದಿಲ್ಲದಿದ್ದರೆ ಮಾತು ಮಧುಸ್ಯಂದಿಯಲ್ಲವೋ ಅದು ವೈದರ್ಭೀರೀತಿ.

[8/25, 4:02 PM] Rohini subbaratnam: ಆಕರ ಋಣ —

#.. ಪುಂಡರೀಕಮಾಲಾ — ರಾ. ಸತ್ಯನಾರಾಯಣ.
#.. ಕರ್ಣಾಟಕಸಂಗೀತವಾಹಿನಿ —ರಾ. ಸತ್ಯನಾರಾಯಣ
#.. ಭಾರತೀಯ ಸಂಗೀತದಲ್ಲಿ ಪರಿಭಾಷಾ ಪ್ರಯೋಗ — ರಾ. ಸತ್ಯನಾರಾಯಣ.
#.. ಶ್ರೀ ಮತಂಗಮುನಿ ವಿರಚಿತ ಬೃಹದ್ದೇಶೀ — ರಾ. ಸತ್ಯನಾರಾಯಣ (ಪೀಠಿಕೆ, ಪಠ್ಯಸಂಪಾದನ, ಅನುವಾದ, ಪಾಠವಿಮರ್ಶೆ, ಅನುಬಂಧ). ಪ್ರ. ಕನ್ನಡ ವಿಶ್ವವಿದ್ಯಾಲಯ ಪ್ರಸಾರಂಗ, ಹಂಪಿ. ವಿದ್ಯಾರಣ್ಯ 583 221,ಇಸವಿ 1998.
#.. ನಾಟ್ಯಶಾಸ್ತ್ರ — ಆದ್ಯ ರಂಗಾಚಾರ್ಯ.
#.. ಧನಂಜಯ ವಿರಚಿತಂ ದಶರೂಪಕಂ —ಎಸ್. ವಿ. ಭೀಮಭಟ್ಟ.
#.. archive.org : Natya Shastra
#.. Abhinavagupta's Treatment of Lasyangas — G. H. Tarlekar.
#.. Indian Kavya Literature, Volume 4.— A. K. Warder.
#.. The Sahithya-Darpana or Mirror of Composition of Vishvanatha — J. R. Ballantyne, Pramada Dasa Mitra.
#.. Natyashastra - Bharatamuni - Kavyamala -1943 - 0117(1) edited by Pandit Kedarnath

ಅಂತರ್ಜಾಲ ಕೊಂಡಿಗಳು
#.. https://archive.org/stream/MusicRes-Articles/AE-Tarlekar-Lasyangas-0098_djvu.txt
#.. https://books.google.co.in/books?id=7WnWL5LtYfcC&pg=PA433&lpg=PA433&dq=rasakanka&source=bl&ots=T6pLVsBsbU&sig=ACfU3U3VXviLEMQ7wsRgsnuOTAPRVFj8YA&hl=en&sa=X&ved=2ahUKEwic2eaQwcXiAhUTVH0KHcCeDl4Q6AEwD3oECAUQAQ#v=onepage&q=rasakanka&f=false
#.. https://books.google.co.in/books?id=IZwvVWVjACEC&pg=PA245&lpg=PA245&dq=geyapada&source=bl&ots=A7FV2J7pD8&sig=ACfU3U2HvCH1f7gjajj7kV0_DmviMi9LgQ&hl=en&sa=X&ved=2ahUKEwi0mYrC_73iAhVDWX0KHQHiB6g4ChDoATACegQIARAB#v=onepage&q=geyapada&f=false
#.. https://swarajyamag.com/culture/the-rich-literary-heritage-of-kashmir-chandraka-and-mentha
#.. http://www.svabhinava.org/abhinava/Tarlekar/Lasy%C3%A2nga.php
#.. https://www.prekshaa.in/article/%E2%80%9C%E0%B2%85%E0%B2%AD%E0%B2%BF%E0%B2%A8%E0%B2%B5%E0%B2%AD%E0%B2%BE%E0%B2%B0%E0%B2%A4%E0%B2%BF%E2%80%9D%E0%B2%AF-%E0%B2%95%E0%B3%86%E0%B2%B2%E0%B2%B5%E0%B3%8A%E0%B2%82%E0%B2%A6%E0%B3%81-%E0%B2%B5%E0%B3%88%E0%B2%B6%E0%B2%BF%E0%B2%B7%E0%B3%8D%E0%B2%9F%E0%B3%8D%E0%B2%AF%E0%B2%97%E0%B2%B3%E0%B3%81-%E2%80%94-%E0%B2%A6%E0%B2%B6%E0%B2%B0%E0%B3%82%E0%B2%AA%E0%B2%95
#.. https://sanskritdocuments.org/doc_z_misc_major_works/natya19.html?lang=ಎನ್-In
#.. https://sreenivasaraos.com/2012/09/13/bharatas-natya-shastra-some-reflections/
#.. Source: Wisdom Library : Nāṭya-śāstra

Copyright protected

#...
http://wiki.phalkefactory.net/index.php?title=Notes_from_AK_Warder%27s_Indian_Kayva_Literature%2C_Vol_1

Copyright protected